ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ

# ಸಹಕಾರ

ಮಾಸಪತ್ರಿಕೆ

ಸಂಪುಟ : 6 । ಸಂಚಿಕೆ : 10 । ಅಕ್ಟೋಬರ್ - 2024 । ಪುಟಗಳು : 20 । ಬೆಲೆ : 25/-




## 2023-24ನೇ ಸಾಲಿನ ಮಹಾಮಂಡಳದ ವಾರ್ಷಿಕ ಸಾಮಾನ್ಯ ಸಭೆ







ನಾಡಿನ ಸಮಸ್ತ ಜನತೆಗೆ
ದಸರಾ ಹಾಗೂ ದೀಪಾವಳಿ ಹಬ್ಬದ
ಶುಭಾಶಯಗಳು



ವಿ. ರಾಜು,
ಅಧ್ಯಕ್ಷರು

ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರು,
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು

ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ,
ಉಪಾಧ್ಯಕ್ಷರು

# ರಾಷ್ಟ್ರೀಯ ಸಹಕಾರ ಒಕ್ಕೂಟದ ಸರ್ವಸಾಧಾರಣ ಸಭೆ



**ನವದೆಹಲಿ :** ದಿನಾಂಕ : 25.09.2024ರಂದು ನವದೆಹಲಿಯಲ್ಲಿ ನಡೆದ ರಾಷ್ಟ್ರೀಯ ಸಹಕಾರ ಒಕ್ಕೂಟದ ಸರ್ವಸಾಧಾರಣ ಸಭೆಯಲ್ಲಿ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಅಧ್ಯಕ್ಷರಾದ ಶ್ರೀ ವಿ ರಾಜು, ನಿರ್ದೇಶಕರುಗಳಾದ ಡಾ ಸಂಜಯ ಪಂಚಾಕ್ಷರಿ ಹೊಸಮಠ, ಶ್ರೀ ಹೊನ್ನಯ್ಯ ವಿ ಹಿರೇಮಠ ಭಾಗವಹಿಸಿ ರಾಷ್ಟ್ರೀಯ ಸಹಕಾರ ಒಕ್ಕೂಟದ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ದಿಲೀಪ್ ಬಾಯ್ ಸಂಘಾನಿ ಹಾಗೂ ಗುಜರಾತ್ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಘನಶ್ಯಾಮ್‌ಭಾಯಿ ಅಮೀನ ಹಾಗೂ ಮಧ್ಯ ಪ್ರದೇಶ, ಪಂಜಾಬ, ಮಣಿಪುರ, ತಮಿಳನಾಡು, ಕೇರಳ, ಉತ್ತರ ಪ್ರದೇಶ, ಗೋವಾ ಮತ್ತು ದೇಶದ ನಾನಾ ರಾಜ್ಯಗಳಿಂದ ಬಂದಂತ ಸಹಕಾರಿಗಳೊಂದಿಗೆ ಭಾರತದ ಸಹಕಾರ ಕ್ಷೇತ್ರವನ್ನು ಉನ್ನತೀಕರಣಗೊಳಿಸಲು ಹಾಗೂ ಸಹಕಾರ ಚಳುವಳಿಯನ್ನು ಇನ್ನಷ್ಟು ಬಲಾಡ್ಯಗೊಳಿಸುವ ಬಗ್ಗೆ ಚಿಂತನ ಮಂಥನ ನಡೆಸಿದರು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪರವಾಗಿ ರಾಷ್ಟ್ರೀಯ ಸಹಕಾರ ಒಕ್ಕೂಟ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ದಿಲೀಪ್ ಬಾಯ್ ಸಂಘಾನಿ ಹಾಗೂ ಗುಜರಾತ್ ಸಹಕಾರ ಮಹಾಮಂಡಳ ಅಧ್ಯಕ್ಷರಾದ ಶ್ರೀ ಜಿ.ಎಚ್. ಅಮೀನ್ ಅವರನ್ನು ಸತ್ಕರಿಸಲಾಯಿತು.

ತದನಂತರ ಹೊಸದಾಗಿ ರಚಿಸಲಾದ ರಾಷ್ಟ್ರೀಯ ಸಹಕಾರ ನಿಬಂಧಕರ ಕಚೇರಿಗೆ ಭೇಟಿ ನೀಡಿ ರಾಷ್ಟ್ರೀಯ ಸಹಕಾರ ನಿಬಂಧಕರ ಅನುಪಸ್ಥಿತಿಯಲ್ಲಿ ಅವರ ಆಧೀನ ಅಧಿಕಾರಿಯಾದ ಶ್ರೀಮತಿ ಮೋನಿಕಾ ಖನ್ನಾ ಇವರನ್ನು ಭೇಟಿಯಾಗಿ ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಸಂಘಗಳ ಕಾರ್ಯ ಚಟುವಟಿಕೆಗಳ ಬಗ್ಗೆ ಚರ್ಚಿಸಿ ಪತ್ತಿನ ಸಹಕಾರ ಸಂಘಗಳು ಎದುರಿಸುತ್ತಿರುವ ಕೆಲವೊಂದಿಷ್ಟು ಸಮಸ್ಯೆಗಳನ್ನು ಕೇಂದ್ರ ಸರ್ಕಾರವೇ ಮಧ್ಯಸ್ಥಿಕೆ ವಹಿಸಿ ಬಗೆಹರಿಸಿ ಕೊಡಬೇಕೆಂದು ವಿನಂತಿಸಿಕೊಂಡರು. ಈ ವಿಷಯವನ್ನು ಆಲಿಸಿದ ಅಧಿಕಾರಿಗಳು ಈ ವಿಷಯವನ್ನು ಮಾನ್ಯ ನಿಬಂಧಕರ ಗಮನಕ್ಕೆ ತರುವುದಾಗಿ ಮತ್ತು ಆದಷ್ಟು ಬೇಗ ಈ ಸಮಸ್ಯೆಯನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದು ಬಗೆಹರಿಸಲು ಪ್ರಯತ್ನಿಸುವುದಾಗಿ ಆಶಾಭಾವ ವ್ಯಕ್ತಪಡಿಸಿದರು.

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಆಡಳಿತ ಮಂಡಳಿ



ಸಿದ್ದನಗೌಡ ಸಂಣರಾಮನಗೌಡ ಪಾಟೀಲ
ಸಹಕಾರಿ ಪಿತಾಮಹ



ಶ್ರೀ ಬಿ.ಎಲ್. ಲಕ್ಕೇಗೌಡರು
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಸಂಸ್ಥಾಪಕ ಅಧ್ಯಕ್ಷರು



ಶ್ರೀ ವಿ. ರಾಜು
ಅಧ್ಯಕ್ಷರು



ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ಉಪಾಧ್ಯಕ್ಷರು



ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ನಿರ್ದೇಶಕರು



ಶ್ರೀ ಸಿ.ಎಂ. ಮಾರೇಗೌಡ
ನಿರ್ದೇಶಕರು



ಡಾ. ಬಿ.ಡಿ. ಭೂಕಾಂತ
ನಿರ್ದೇಶಕರು



ಡಾ. ಸಂಜಯ ಪಂ. ಹೊಸಮಠ
ನಿರ್ದೇಶಕರು



ಶ್ರೀ ಎಂ.ಜಿ. ನರೇಂದ್ರ ಕುಮಾರ
ನಿರ್ದೇಶಕರು



ಶ್ರೀ ಡಿ. ಚನ್ನಯ್ಯ
ನಿರ್ದೇಶಕರು



ಶ್ರೀ ಕೆ. ಕೃಷ್ಣಮೂರ್ತಿ
ನಿರ್ದೇಶಕರು



ಶ್ರೀ ಜಿ. ಮಲ್ಲಿಕಾರ್ಜುನಯ್ಯ
ನಿರ್ದೇಶಕರು



ಶ್ರೀ ತಮ್ಮಣ್ಣ ಬಿ. ಕೆಂಚರಡ್ಡಿ
ನಿರ್ದೇಶಕರು



ಶ್ರೀ ಧರೆಪ್ಪ ಎಂ. ಅಲಗೂರ
ನಿರ್ದೇಶಕರು



ಶ್ರೀ ಗುರುಪಾದಪ್ಪಗೌಡ ಬಿ. ಪಾಟೀಲ
ನಿರ್ದೇಶಕರು



ಶ್ರೀ ಹೊನ್ನಯ್ಯ ವಿ. ಹಿರೇಮಠ
ನಿರ್ದೇಶಕರು



ಶ್ರೀ ಪಿ.ಕೆ. ಜಯಕೃಷ್ಣೇಗೌಡ
ನಿರ್ದೇಶಕರು



ಶ್ರೀ ಶೇಖರಗೌಡ ಮಾಲಿ ಪಾಟೀಲ
ನಿರ್ದೇಶಕರು



ಶ್ರೀ ಡಿ.ಆರ್. ನಾಗೇಶಪ್ಪ
ನಿರ್ದೇಶಕರು



ಶ್ರೀ ಉಮೇಶ ಶಿ ಬಾಳಿ
ನಿರ್ದೇಶಕರು



ಶ್ರೀ ರವೀಂದ್ರ ಪ್ರಲ್ಹಾದ ಕಲಬುರ್ಗಿ
ನಿರ್ದೇಶಕರು




ಶ್ರೀ ಚಿತ್ತರಂಜನ್ ಬೋಳಾರ್
ನಿರ್ದೇಶಕರು



ಶ್ರೀ ಪ್ರಜ್ವಲ್ ಕೆ.ಎನ್.
ಮುಖ್ಯಕಾರ್ಯನಿರ್ವಹಣಾಧಿಕಾರಿ

SAHAKARA VARTHA PATHRIKE KANNADA MONTHLY
RNI-Reg No. KARKAN/2018/75796
Post Reg No. KA-BGW/1816/2022-24
Posting Date : 1 and 5 Every Month
Posted at : P/C RMS Bhavan, Bangalore PSO,
Blore-26 Published On : 30th of Previous Month
License to post without prepayment
PMG BG/WPP-405/2022-2024




ಇಂದ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು.
ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

Printed at : Biligiri Printers
Chamrajpet, Bengaluru - 18

## ಸಂಪಾದಕೀಯ



ವಿ. ರಾಜು
ಅಧ್ಯಕ್ಷರು

ಪತ್ತಿನ ಸಹಕಾರ ಮಹಾಮಂಡಳದಲ್ಲಿ ಈಗಾಗಲೇ 2200ಕ್ಕೂ ಹೆಚ್ಚು ಸಹಕಾರ ಸಂಘಗಳು ಪಡೆದಿವೆ. ಉಳಿದ ಪತ್ತು/ನೌಕರರ ಪತ್ತು ಸೇರಿದಂತೆ ಸದಸ್ಯತ್ವ ಅವಕಾಶಗಳು ಇರುವ ಸಂಘಗಳಿಗೆ ಸದಸ್ಯತ್ವ ಪಡೆಯಬೇಕೆಂದು ಈ ಮೂಲಕ ಮಹಾಮಂಡಳದ ಆಡಳಿತ ಮಂಡಳಿ ಪರವಾಗಿ ಮನವಿ ಮಾಡುತ್ತೇನೆ.

# ಪತ್ತಿನ ಸಹಕಾರ ಸಂಘಗಳ ಸೇವೆ ಶ್ಲಾಘನೀಯ

ಭಾರತದ ಸಹಕಾರ ಚಳುವಳಿಯಲ್ಲಿ ಕೃಷಿಯೇತರ ಪತ್ತಿನ ಸಹಕಾರ ಸಂಘಗಳ ಸಂಖ್ಯೆ 50,000 ದಾಟಿದೆ. ಕರ್ನಾಟಕದಲ್ಲಿ 5500 ನೂರಕ್ಕೂ ಹೆಚ್ಚು ಪತ್ತಿನ ಸಹಕಾರ ಸಂಘಗಳು ಕ್ರಿಯಾಶೀಲ ಸೇವೆಯಲ್ಲಿ ತೊಡಗಿವೆ.

ರಾಜ್ಯದ ಪತ್ತಿನ ಸಹಕಾರ ಸಂಘಗಳಲ್ಲಿ 25 ಲಕ್ಷಕ್ಕೂ ಅಧಿಕ ಸದಸ್ಯರಿದ್ದಾರೆ ಸಂಘಗಳು ಸದಸ್ಯರಿಗೆ ಸಕಾಲದಲ್ಲಿ ಸಾಲದ ನೆರವು ನೀಡಿ ಅವರ ಅಗತ್ಯತೆಗಳನ್ನು ಪೂರೈಸುವುದರ ಜೊತೆಗೆ ಸದಸ್ಯರ ಸ್ವಾವಲಂಬಿ ಬದುಕಿಗೆ ಮಹತ್ತರ ಪಾತ್ರ ವಹಿಸಿರುವುದು ಶ್ಲಾಘನೀಯ ವಿಚಾರವಾಗಿದೆ.

ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ಸೆಪ್ಟೆಂಬರ್–25ರ ಒಳಗಾಗಿ ಎಲ್ಲಾ ಸಹಕಾರ ಸಂಘಗಳ ವಾರ್ಷಿಕ ಮಹಾಸಭೆಗಳು ಮುಗಿದಿವೆ. ಬಹುತೇಕ ಎಲ್ಲಾ ಸಂಸ್ಥೆಗಳು ಲಾಭದಲ್ಲಿದೆ ಎಂಬ ಆಶಾಭಾವನೆ ಇದೆ. ಹೀಗಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಪತ್ತಿನ ಸಹಕಾರ ಮಹಾಮಂಡಳದಲ್ಲಿ ಈಗಾಗಲೇ 2200ಕ್ಕೂ ಹೆಚ್ಚು ಸಹಕಾರ ಸಂಘಗಳು ಪಡೆದಿವೆ. ಉಳಿದ ಪತ್ತು/ನೌಕರರ ಪತ್ತು ಸೇರಿದಂತೆ ಸದಸ್ಯತ್ವ ಅವಕಾಶಗಳು ಇರುವ ಸಂಘಗಳಿಗೆ ಸದಸ್ಯತ್ವ ಪಡೆಯಬೇಕೆಂದು ಈ ಮೂಲಕ ಮಹಾಮಂಡಳದ ಆಡಳಿತ ಮಂಡಳಿ ಪರವಾಗಿ ಮನವಿ ಮಾಡುತ್ತೇನೆ.

ಪತ್ತಿನ ಸಹಕಾರ ಮಹಾಮಂಡಳವು ಇ–ಸ್ಟಾಂಪಿಂಗ್ ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತಿದೆ. ಇದರ ಪ್ರಯೋಜನವನ್ನು ಎಲ್ಲಾ ಪತ್ತಿನ ಸಹಕಾರ ಸಂಘಗಳು ಪಡೆಯಲು ಕೋರುತ್ತೇನೆ.

ಅಕ್ಟೋಬರ್ ಮಾಹೆಯಲ್ಲಿ ಮಹಾತ್ಮಾಗಾಂಧಿ ಜಯಂತಿ, ನಾಡಹಬ್ಬ ದಸರಾ ಹಾಗೂ ದೀಪಾವಳಿ ಹಬ್ಬಗಳಿವೆ. ನಮ್ಮೆಲ್ಲಾ ಸಹಕಾರಿ ಬಂಧುಗಳಿಗೆ ಶುಭಾಶಯಗಳನ್ನು ಕೋರುತ್ತೇನೆ.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

# ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀ ವಿ. ರಾಜು**

ಕಾರ್ಯನಿರ್ವಾಹಕ ಸಂಪಾದಕರು:
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ**

ಸದಸ್ಯರು : **ಡಾ॥ ಸಂಜಯ ಪಿ. ಹೊಸಮಠ**
**ಶ್ರೀ ಎಂ.ಜೆ. ನರೇಂದ್ರಕುಮಾರ**
**ಶ್ರೀ ಕೆ. ಕೃಷ್ಣಮೂರ್ತಿ**
**ಶ್ರೀ ಡಿ.ಆರ್. ನಾಗೇಶಪ್ಪ**
**ಶ್ರೀ ಹೊನ್ನಯ್ಯ ವೀ ಹಿರೇಮಠ**
**ಶ್ರೀ ಚಿತ್ತರಂಜನ್ ಬೋಳಾರ್**

ಸಂಪಾದಕರು :
**ಪ್ರಜ್ವಲ್ ಕೆ.ಎನ್.**
ಮುಖ್ಯಕಾರ್ಯನಿರ್ವಹಣಾಧಿಕಾರಿ



ಇತ್ತೀಚೆಗೆ ಅಧಿಕಾರ ಸ್ವೀಕರಿಸಿದಂತಹ ಕರ್ನಾಟಕ ರಾಜ್ಯ ಸಹಕಾರ ಸಂಘಗಳ ನಿಬಂಧಕರಾದ ಶ್ರೀ ಟಿ.ಹೆಚ್.ಎಂ.ಕುಮಾರ್ ರವರನ್ನು ಪತ್ತಿನ ಮಹಾಮಂಡಳದ ಅಧ್ಯಕ್ಷರಾದ ವಿ.ರಾಜು, ನಿರ್ದೇಶಕರುಗಳಾದ ಡಾ॥ ಸಂಜಯ ಪಿ ಹೊಸಮಠ, ಶ್ರೀ ಧರೇಪ್ಪ ಮಹದೇವ ಆಲಗೂರ, ಶ್ರೀ ತಮ್ಮಣ್ಣ ಬಾಲಪ್ಪ ಕೆಂಚರಡ್ಡಿ ಮತ್ತು ಶ್ರೀ ಹೊನ್ನಯ್ಯ ವೀ ಹಿರೇಮಠರವರು ಭೇಟಿ ಮಾಡಿ ಅಭಿನಂದಿಸಿ, ಶುಭಾಶಯಗಳನ್ನು ಸಲ್ಲಿಸಿದರು.

**ಸುಭಾಷಿತ :** ಮನುಷ್ಯ ಚಂದ್ರಮಂಡಲಕ್ಕೆ ಹೋಗಿ ಬಂದರೂ ಕ್ಷುದ್ರಬುದ್ಧಿ, ಅಂಧಶ್ರದ್ಧೆ ಮೀರಲು ಸಾಧ್ಯವಾಗಿಲ್ಲ. – ಕೆ.ಪಿ.ಪೂರ್ಣಚಂದ್ರ ತೇಜಸ್ವಿ

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1770/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

# 2023-24ನೇ ಸಾಲಿನ ಪತ್ತಿನ ಮಹಾಮಂಡಳದ ವಾರ್ಷಿಕ ಸಭೆ




**ಬೆಂಗಳೂರು :** ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ 2023–24ನೇ ಸಾಲಿನ 20ನೇ ವಾರ್ಷಿಕ ಸಾಮಾನ್ಯ ಸಭೆಯು ಸೆಪ್ಟಂಬರ್ 19 ರಂದು ಕೆ.ಇ.ಬಿ. ಇಂಜಿನಿಯರ್ಸ್ ಸಭಾಂಗಣ, ಬೆಂಗಳೂರು ಇಲ್ಲಿ ಮಹಾಮಂಡಳದ ಅಧ್ಯಕ್ಷರಾದ ಶ್ರೀ ವಿ.ರಾಜು ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಆಡಳಿತಮಂಡಳಿ ಸದಸ್ಯರುಗಳು ಜ್ಯೋತಿ ಬೆಳಗಿಸಿ ಸಭೆಗೆ ಚಾಲನೆ ನೀಡಿದರು.

ವಾರ್ಷಿಕ ಮಹಾಸಭೆಯಲ್ಲಿ ಉಪಾಧ್ಯಕ್ಷರಾದ ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ, ಮಹಾಮಂಡಳದ ಆಡಳಿತಮಂಡಳಿ ಸದಸ್ಯರುಗಳಾದ ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ, ಶ್ರೀ ಸಿ.ಎಂ. ಮಾರೇಗೌಡ, ಡಾ. ಬಿ.ಡಿ. ಭೂಕಾಂತ, ಡಾ॥ ಸಂಜಯ ಪಿ ಹೊಸಮಠ, ಶ್ರೀ ಎಂ.ಜೆ. ನರೇಂದ್ರಕುಮಾರ, ಶ್ರೀ ಡಿ. ಚನ್ನಯ್ಯ, ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಜಿ. ಮಲ್ಲಿಕಾರ್ಜುನಯ್ಯ, ಶ್ರೀ ತಮ್ಮಣ್ಣ ಬಾಲಪ್ಪ ಕೆಂಚರಡ್ಡಿ, ಶ್ರೀ ಧರೇಪ್ಪ ಎಂ. ಆಲಗೂರ ಶ್ರೀ ಹೊನ್ನಯ್ಯ ವಿ ಹಿರೇಮಠ ಶ್ರೀ ಪಿ.ಕೆ. ಜಯಕೃಷ್ಣೇಗೌಡ ಶ್ರೀ ಶೇಖರಗೌಡ ಮಾಲಿ ಪಾಟೀಲ ಶ್ರೀ ಡಿ.ಆರ್. ನಾಗೇಶಪ್ಪ, ಶ್ರೀ ಉಮೇಶ್ ಶಿ ಬಾಳಿ, ಶ್ರೀ ರವೀಂದ್ರ ಪ್ರಲ್ಹಾದ ಕಲಬುರ್ಗಿ, ಶ್ರೀ ಚಿತ್ತರಂಜನ್ ಬೋಳಾರ್ ಉಪಸ್ಥಿತರಿದ್ದರು.

ಕಾರ್ಯಕ್ರಮದ ಪ್ರಾರಂಭದಲ್ಲಿ ನಿರ್ದೇಶಕರಾದ ಶ್ರೀ ಚಿತ್ತರಂಜನ್ ಬೋಳಾರ್‌ರವರು ಸ್ವಾಗತ ಭಾಷಣ ಮಾಡಿದರು. ನಂತರ ವಾರ್ಷಿಕ ಸಾಮಾನ್ಯ ಸಭೆಯ ಮೀಟಿಂಗ್ ನೋಟೀಸನ್ನು ಮುಖ್ಯಕಾರ್ಯನಿರ್ವಹಣಾಧಿಕಾರಿ ಪ್ರಜ್ವಲ್ ಕೆ.ಎನ್ ರವರು ಓದಿದರು.

ಮಹಾಮಂಡಳದ ವತಿಯಿಂದ ಅತಿಹೆಚ್ಚು ಇ–ಸ್ಟಾಂಪ್ ಪೇಪರ್‌ಗಳನ್ನು ಮುದ್ರಿಸಿರುವ ಹಾಗೂ ಅತಿ ಹೆಚ್ಚು ಇ–ಸ್ಟಾಂಪಿಂಗ್ ಮುದ್ರಾಂಕವನ್ನು ಮುದ್ರಿಸಿರುವ ವಿಭಾಗವಾರು ಇ–ಸ್ಟಾಂಪಿಂಗ್ ಕೇಂದ್ರಗಳ ಪ್ರತಿನಿಧಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು.

**ಗ್ರೂಪ್–1 ವಿಭಾಗದಿಂದ** ವಿಶ್ವ ಭಾರತಿ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿ., ಬೆಂಗಳೂರು. ಪ್ರಗತಿ ಮಹಿಳಾ ಸಹಕಾರ ಸಂಘ ನಿ., ಕೋರಮಂಗಲ, ಬೆಂಗಳೂರು, ಯುಕ್ತಿ ಮಹಿಳಾ ಸಹಕಾರ ಸಂಘ ನಿ., ಶ್ರೀ ಗೌರಿಗಣೇಶ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ.ಕೆ.ಆರ್.ಪುರಂ, ಬೆಂಗಳೂರು, ಶ್ರೀ ಅಣ್ಣಯ್ಯ ಶೆಟ್ಟಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ದೊಡ್ಡಬಸವನಪುರ, ಬೆಂಗಳೂರು, ಅನುವೃದ್ಧಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಬೆಂಗಳೂರು.

**ಗ್ರೂಪ್–2 ವಿಭಾಗದಿಂದ** ಶ್ರೀ ವಾಸವಿ ಅಭಿವೃದ್ಧಿ ಸಹಕಾರ ಸಂಘ ನಿ., ದಾವಣಗೆರೆ, ಶಂಕರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಕೋಲಾರ, ಸರ್ಕಾರಿ ನೌಕರರ ವಿವಿಧೋದ್ದೇಶ ಸಹಕಾರ ಸಂಘ ತುಮಕೂರು, ಬನಶಂಕರಿ ಮಹಿಳಾ ವಿವಿಧೋದ್ದೇಶ ಗೃಹ ಕೈಗಾರಿಕಾ ಮಾರಾಟ ಸಹಕಾರ ಸಂಘ ನಿ., ಶಿಕಾರಿಪುರ, ಶಿವಮೊಗ್ಗ, ಬಸವೇಶ್ವರ ಪತ್ತಿನ ಸಹಕಾರ ಸಂಘ ನಿ., ಹಿರಿಯೂರು, ಚಿತ್ರದುರ್ಗ, ಪ್ರಗತಿ ಪತ್ತಿನ ಸಹಕಾರ ಸಂಘ ನಿ., ತುಮಕೂರು ಜಿಲ್ಲೆ

**ಗ್ರೂಪ್–3 ವಿಭಾಗದಿಂದ** ಹುಬ್ಬಳ್ಳಿ ವಕೀಲರ ಪತ್ತಿನ ಸಹಕಾರಿ ಸಂಘ




ನಿ., ಹುಬ್ಬಳ್ಳಿ ಧಾರವಾಡ, ಯಮಕನಮರಡಿ ಅರ್ಬನ್ ಕೋ–ಆಪ್ ಕ್ರಡಿಟ್ ಸೊಸಾಯಿಟಿ ಲಿ., ಯಮಕನಮರಡಿ ಬೆಳಗಾವಿ ಜಿಲ್ಲೆ. ಶ್ರೀ ಭಾಗ್ಯಲಕ್ಷ್ಮಿ ಪತ್ತಿನ ಸಹಕಾರ ಸಂಘ ನಿಯಮಿತ.,ಖಾನಾಪುರ, ಬೆಳಗಾವಿ ಜಿಲ್ಲೆ, ಅವಾಮಿ ಅರ್ಬನ್ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿ., ಕಛೇರಿ ರಸ್ತೆ, ಬೆಳಗಾವಿ ಜಿಲ್ಲೆ, ಧಾರವಾಡ ಜಿಲ್ಲಾ ಕಂದಾಯ ನೌಕರರ ಪತ್ತಿನ ಸಹಕಾರ ಸಂಘ ನಿ., ಯು.ಬಿ.ಹಿಲ್, ಧಾರವಾಡ ಶ್ರೀ ಏಕಲವ್ಯ ಅರ್ಬನ್ ಕ್ರೆಡಿಟ್ ಕೋ–ಫಾರೇಟಿವ್ ಸೊಸೈಟಿ ಲಿ., ರಾಣೆಬೆನ್ನೂರು ಹಾವೇರಿ.

**ಗ್ರೂಪ್–4 ವಿಭಾಗದಿಂದ** ಸಮನ್ವಯ ವಿವಿಧೋದ್ದೇಶ ಸಹಕಾರ ಸಂಘ ನಿ., ಜೇವರ್ಗಿ, ಗುಲ್ಬರ್ಗ ಜಿಲ್ಲೆ, ವರದ ವಿನಾಯಕ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಪಾರ್ವತಿ ನಗರ ಬಳ್ಳಾರಿ, ಶೇಖ್ ಪತ್ತಿನ ಸಹಕಾರ ಸಂಘ ನಿ., ರಾಯಚೂರು, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ನೌಕರರ ಪತ್ತಿನ ಸಹಕಾರ ಸಂಘ ನಿ. (ಶೋರಾಪುರ ಶಾಖೆ) ರಾಯಚೂರು, ಖ್ವಾಜಾ ಗರೀಬನವಾಜ ಮೈನಾರಿಟಿ ಮಲ್ಟಿಪರಪಸ್ ಸೋಸಾಯಿಟಿ ಲಿ., (ಬಿಜಾಪುರ–7 ಶಾಖೆ) ವಿಜಯಪುರ, ಸಹಕಾರ ಇಲಾಖಾ ನೌಕರರ ಪತ್ತಿನ ಸಹಕಾರ ಸಂಘ ನಿ., ವಿಜಯಪುರ.

**ಗ್ರೂಪ್–5 ವಿಭಾಗದಿಂದ** ಆತ್ಮಶಕ್ತಿ ವಿವಿಧೋದ್ದೇಶ ಸಹಕಾರ ಸಂಘ ನಿ., (ಕೊರಂಗಪಾಡಿ ಶಾಖೆ) ದಕ್ಷಿಣಕನ್ನಡ ಜಿಲ್ಲೆ, ರಾಜು ಕ್ಷತ್ರಿಯ ಪತ್ತಿನ ಸಹಕಾರ ಸಂಘ ನಿ., ಮೈಸೂರು, ಶ್ರೀ ಶ್ರೀಕಂಠೇಶ್ವರ ವಿವಿಧೋದ್ದೇಶಗಳ ಸಹಕಾರ ಸಂಘ ನಿಯಮಿತ, (ವಿ.ವಿ.ಮೊಹಲ್ಲಾ ಶಾಖೆ) ಮೈಸೂರು, ನವನಿಧಿ ವಿವಿಧೋದ್ದೇಶ ಸಹಕಾರ ಸಂಘ ನಿ., ದಕ್ಷಿಣ ಕನ್ನಡ ಜಿಲ್ಲೆ, ಅರಸು ಮಂಡಳಿ ಪತ್ತಿನ ಸಹಕಾರ ಸಂಘ ನಿ., ಮೈಸೂರು, ಬ್ರಹ್ಮರ್ಷಿ ಕ್ರೆಡಿಟ್ ಕೋ–ಫಾರೇಟಿವ್ ಸೊಸೈಟಿ ಲಿ., (ನಂಜನಗೂಡು–2 ಶಾಖೆ) ಹಾಜರಿದ್ದ ಇ–ಸ್ಟಾಂಪಿಂಗ್ ಕೇಂದ್ರಗಳ ಪ್ರತಿನಿಧಿಗಳಿಗೆ ಆಯಾ ವಿಭಾಗದ ಆಡಳಿತಮಂಡಳಿ ಸದಸ್ಯರು ಸನ್ಮಾನಿಸಿ ಅಭಿನಂದಿಸಿದರು. ಶ್ರೀಮತಿ ಆಶಾಲತಾ ಪಿ. ಕಾರ್ಯಕ್ರಮ ನಿರೂಪಣೆ ಮಾಡಿದರು. ಶ್ರೀ ಉಮೇಶ್ ಶಿ ಬಾಳಿರವರು ಕೊನೆಯಲ್ಲಿ ವಂದನೆ ಸಲ್ಲಿಸಿದರು.



# ಯಶವಂತಪುರ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಲಿ.

## ಸುವರ್ಣ ಮಹೋತ್ಸವ ಆಚರಣೆ




**ಬೆಂಗಳೂರು :** ಯಶವಂತಪುರ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ ಸುವರ್ಣ ಮಹೋತ್ಸವ ಆಚರಣೆ ಸಮಾರಂಭವು ದಿನಾಂಕ : 16.09.2024ರಂದು ಚೌಡಯ್ಯ ಸ್ಮಾರಕ ಭವನ, ವೈಯಾಲಿ ಕಾವಲ್, ಬೆಂಗಳೂರು ಇಲ್ಲಿ ನಡೆಯಿತು.

ಸಮಾರಂಭದಲ್ಲಿ ಕಿರುಚಿತ್ರ ಪ್ರದರ್ಶನ, ಸ್ಮರಣ ಸಂಚಿಕೆ ಬಿಡುಗಡೆ, ಸನ್ಮಾನ, ಗೌರವಾರ್ಪಣೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಸರ್ವೋಚ್ಛ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ವಿ.ಗೋಪಾಲಗೌಡ ರವರು ಜ್ಯೋತಿ ಬೆಳಗಿಸಿ ಸಮಾರಂಭವನ್ನು ಉದ್ಘಾಟಿಸಿದರು.

ಮಹಿಳೆಯರು ಕುಟುಂಬದ ನಿರ್ವಹಣೆಯೊಂದಿಗೆ ಉದ್ಯೋಗದಲ್ಲೂ ತೊಡಗಿಸಿಕೊಂಡು ಶ್ರಮ ಜೀವಿಗಳಾಗಿದ್ದಾರೆ. ಮಹಿಳೆಯರಿಗೆ ಎಲ್ಲಾ ರಂಗದಲ್ಲಿ ಅವಕಾಶಗಳು ಸಿಗುವಂತಾಗಲಿ. ಸಹಕಾರ ಸಂಘಗಳಲ್ಲಿ ಮಹಿಳೆಯರಿಗೆ ಆಡಳಿತಮಂಡಳಿಯಲ್ಲಿ ಹೆಚ್ಚಿನ ಅವಕಾಶಗಳನ್ನು ನೀಡಬೇಕು ಎಂದು ತಿಳಿಸಿದರು.

ಎನ್. ಅಶ್ವತ್ಥನಾರಾಯಣ್ ಶಾಸಕರು, ಇವರು ಸಂಘದ



ಹಿರಿಯ ನಿರ್ದೇಶಕರಾದ ಎಂ.ಜೆ. ನರೇಂದ್ರಕುಮಾರರವರ ಸಂಪಾದಕತ್ವದ "ಯಶವಂತ ಸುವರ್ಣ ಸ್ಮರಣ ಸಂಚಿಕೆ" ಯನ್ನು ಅನಾವರಣ ಮಾಡಿದರು.

ಕಂದಾಯ ಸಚಿವ ಕೃಷ್ಣಬೈರೇಗೌಡ ಇವರು ಸಂಘವು 50 ವರ್ಷಗಳಿಂದ ನಿರಂತರವಾಗಿ ಲಾಭದಾಯಕವಾಗಿ ನಡೆಸಿ, ಎರಡು ಶಾಖೆಗಳನ್ನು ತೆರೆದು, ತನ್ನ ವ್ಯವಹಾರ ವ್ಯಾಪ್ತಿಯನ್ನು ವಿಸ್ತರಿಸಿಕೊಂಡು ತನ್ನ ಸದಸ್ಯರಿಗೆ ಆರ್ಥಿಕ ನೆರವನ್ನು ನೀಡುತ್ತಾ ಸಹಕಾರ ತತ್ವದಲ್ಲಿ ನಡೆಸುತ್ತಿರುವ ಆಡಳಿತ ಮಂಡಳಿಗೆ ಹಾಗೂ ಸಿಬ್ಬಂದಿವರ್ಗದವರಿಗೆ ಶುಭ ಹಾರೈಸಿದರು.

ಸಂಘದ ಅಧ್ಯಕ್ಷರಾದ ಐ. ಜನಾರ್ದನ ರೆಡ್ಡಿರವರು ಸಂಘವು ನಿರಂತರವಾಗಿ 50 ವರ್ಷಗಳಿಂದ ವ್ಯವಹಾರ ನಡೆಸುವುದಕ್ಕೆ ಸದಸ್ಯರ ಸಹಕಾರ ಹಾಗೂ ಆಡಳಿತಮಂಡಳಿಯ ನಿಷ್ಠೆಯ ಸೇವೆಯಿಂದ ಬೃಹದಾಕಾರವಾಗಿ ಬೆಳೆಯಲು ಸಾಧ್ಯವಾಗಿದೆ. ಇನ್ನು



ಮುಂದೆಯೂ ಇದೇ ರೀತಿ ಸಹಕಾರ, ಸೇವೆಯನ್ನು ಮುಂದುವರಿಸಲು ಕೋರಿದರು.

ಈ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಸಂಘದ ಹಿರಿಯ ನಿರ್ದೇಶಕರುಗಳಿಗೆ ಸನ್ಮಾನಿಸಿ ಗೌರವಿಸಲಾಯಿತು. ಸಂಘದ ನಿರ್ದೇಶಕರುಗಳು ವೇದಿಕೆ ಮೇಲೆ ಉಪಸ್ಥಿತರಿದ್ದರು.

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಅಧ್ಯಕ್ಷರಾದ ವಿ.ರಾಜು, ಉಪಾಧ್ಯಕ್ಷರಾದ ಕೆ.ಕೆ. ಮಹೇಂದ್ರಪ್ರಸಾದ್ ಗೌಡ, ನಿರ್ದೇಶಕರುಗಳಾದ ಸಿ.ಎಂ. ಮಾರೇಗೌಡ ಮತ್ತು ಡಿ. ಚನ್ನಯ್ಯ, ಮುಖ್ಯಕಾರ್ಯನಿರ್ವಹಣಾಧಿಕಾರಿ ಪ್ರಜ್ವಲ್ ಕೆ.ಎಸ್, ಪತ್ತಿನ ಮಹಾಮಂಡಳದ ಮಾಜಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಟಿ.ಎನ್. ನಾರಾಯಣಗೌಡರವರು ಸಮಾರಂಭದಲ್ಲಿ ಪಾಲ್ಗೊಂಡು ಶುಭ ಹಾರೈಸಿದರು. ಸಂಘದ ಹಿರಿಯ ನಿರ್ದೇಶಕರಾದ ಹಾಗೂ ಪತ್ತಿನ ಮಹಾಮಂಡಳದ ನಿರ್ದೇಶಕರು ಆಗಿರುವ ಎಂ.ಜೆ. ನರೇಂದ್ರ ಕುಮಾರ ರವರು ವಂದನಾರ್ಪಣೆ ಮಾಡಿದರು.



# ಸುವರ್ಣ ಸಂಭ್ರಮ ಆಚರಿಸಿದ ಶಿವಮೊಗ್ಗದ ಪದವೀಧರರ ಸಹಕಾರ ಸಂಘ




**ಶಿವಮೊಗ್ಗ :** ನಗರದ ಪದವೀಧರರ ಸಹಕಾರ ಸಂಘವು ಜಿಲ್ಲೆಯ ಪ್ರತಿಷ್ಠಿತ ಸಹಕಾರ ಸಂಘವಾಗಿದ್ದು 1971 ಸೆಪ್ಟೆಂಬರ್ 27 ರಂದು ಪ್ರಾರಂಭವಾಗಿ ಯಶಸ್ವಿಯಾಗಿ 53 ವರ್ಷಗಳನ್ನು ಪೂರೈಸಿದೆ. ರಾಜ್ಯ ಮತ್ತು ಜಿಲ್ಲಾ ಅತ್ಯುತ್ತಮ ಸಹಕಾರ ಸಂಘವೆಂದು ಪ್ರಶಸ್ತಿ ಪಡೆಯುವುದರೊಂದಿಗೆ ಇಡೀ ರಾಜ್ಯಕ್ಕೆ ಮಾದರಿ ಸಂಸ್ಥೆಯಾಗಿ ಸದಸ್ಯ ಗ್ರಾಹಕರ ಸೇವೆಯಲ್ಲಿ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ.

ಸಂಘವು ಪ್ರಾರಂಭದಲ್ಲಿ ಕೇವಲ 163 ಸದಸ್ಯರಿಂದ ರೂ. 8276–00ಗಳ ಷೇರು ಬಂಡವಾಳದೊಂದಿಗೆ, ರೂ.1001–00 ಠೇವಣಿ ಸಂಗ್ರಹಣೆ ಹಾಗೂ 5400–00 ರೂ.ಗಳ ಸಾಲ ನೀಡಿಕೆಯಿಂದ 34–00 ರೂ.ಗಳ ನಿವ್ವಳ ಲಾಭವನ್ನು ಗಳಿಸಿರುತ್ತದೆ.

ಸಂಘದ ಪ್ರಗತಿಯ ಅಂಕಿ ಅಂಶಗಳನ್ನು ಮಾರ್ಚ್ 2024ರ ಅಂತ್ಯಕ್ಕೆ ಹೋಲಿಸಿದಾಗ ಸದಸ್ಯರ ಸಂಖ್ಯೆ 7081 ಆಗಿದ್ದು, ರೂ.288.82 ಲಕ್ಷಗಳ ಷೇರು ಬಂಡವಾಳವನ್ನು ಹೊಂದಿದ್ದು, ರೂ.65.48 ಕೋಟಿಗಳ ನಿವ್ವಳ ಠೇವಣಿ ಸಂಗ್ರಹಿಸಿ, 54.73 ಕೋಟಿ ರೂ.ಗಳ ಸಾಲ ನೀಡುವುದರೊಂದಿಗೆ ರೂ. 214.49 ಕೋಟಿ ಒಟ್ಟು ದಾಖಲೆಯ ವಹಿವಾಟು ನಡೆಸಿ, ರೂ.7.41 ಕೋಟಿ ರೂ.ಗಳ ಒಟ್ಟು ಆದಾಯ ಗಳಿಸಿ, ರೂ.1,29,16,136–25ಗಳ ದಾಖಲೆ ನಿವ್ವಳ ಲಾಭವನ್ನು ಗಳಿಸಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಸಾಲ ವಸೂಲಾತಿಯು ಅತ್ಯುತ್ತಮವಾಗಿದ್ದು, ಅನುತ್ಪಾದಕ ಆಸ್ತಿ ಪ್ರಮಾಣವು ಶೇಕಡ 2.56ರಷ್ಟಿರುತ್ತದೆ. ಇದಲ್ಲದೆ ಸತತವಾಗಿ ಕಳೆದ 6 ವರ್ಷಗಳಿಂದ ರೂ.1 ಕೋಟಿಗೂ ಅಧಿಕ ಲಾಭವನ್ನು ಗಳಿಸಿರುತ್ತದೆ ಎಂಬುದು ಸಂತಸದ ವಿಚಾರವಾಗಿದೆ.

**ಪ್ರಗತಿ ನೋಟ 1971–2024**

| ಕ್ರ.ಸಂ. | ವಿಷಯಗಳು | 1971–72 | 2023–24 |
|---|---|---|---|
| 1 | ಸದಸ್ಯತ್ವ | 163 | 7081 |
| 2 | ಷೇರು ಬಂಡವಾಳ | 8276.00 | 2,88,82,950–00 |
| 3 | ಆಪದ್ಧನ ನಿಧಿ | – | 3,08,70,789–00 |
| 4 | ಕಟ್ಟಡ&ಇತರೆ ನಿಧಿಗಳು | – | 7,40,49,559–00 |
| 5 | ಸದಸ್ಯರಿಂದ ಠೇವಣಿಗಳು | 1001.00 | 65,48,66,564–00 |
| 6 | ಸಾಲ ನೀಡಿಕೆ ರೂ. | 5400.00 | 54,73,61,807.68 |
| 7 | ನಿವ್ವಳ ಲಾಭ ರೂ. | 34.00 | 1,29,16,136–25 |
| 8 | ಆಡಿಟ್ ವರ್ಗೀಕರಣ ಶ್ರೇಣಿ | ಬಿ | ಬಿ |

ಸಂಘವು ಇತ್ತೀಚೆಗೆ ತನ್ನ ಸಾರ್ಥಕತೆಯ 50 ವರ್ಷಗಳನ್ನು ಪೂರೈಸಿ ಸುವರ್ಣ ಮಹೋತ್ಸವವನ್ನು ಆಚರಿಸಿಕೊಂಡಿದ್ದು, ಇದೇ ಸಂದರ್ಭದಲ್ಲಿ ಸಂಘದ ಶಾಖೆ ಮತ್ತು ಶೈಕ್ಷಣಿಕ ಆಡಳಿತ ಕಛೇರಿಯ ನೂತನ ಕಟ್ಟಡ ನಿರ್ಮಾಣದ ಶಿಲಾನ್ಯಾಸವನ್ನು ನೆರವೇರಿಸಲಾಯಿತು. ಗಣ್ಯಾತಿಗಣ್ಯರು ಹಾಗೂ ಸಂಘದ ಸದಸ್ಯರು ಸಮಾರಂಭಕ್ಕೆ ಸಾಕ್ಷಿಯಾದರು.





ಸುವರ್ಣ ಮಹೋತ್ಸವ ಸಮಾರೋಪ ಸಮಾರಂಭವನ್ನು ದಿನಾಂಕ : 21–09–2024ರಂದು ಆಚರಿಸಲಾಯಿತು. ಇದರ ಸವಿ ನೆನಪಿಗಾಗಿ ಸ್ಮರಣಸಂಚಿಕೆಯನ್ನು ಹೊರತರಲಾಯಿತು ಹಾಗೂ ಶಿವಮೊಗ್ಗದ ಕೃಷಿನಗರದಲ್ಲಿ 4 ಅಂತಸ್ತಿನ ಕಟ್ಟಡ ನಿರ್ಮಾಣ ಮಾಡಲಾಗಿದ್ದು, ಮೊದಲ ಅಂತಸ್ತಿನಲ್ಲಿರುವ ನೂತನ ಶಾಖಾ ಕಟ್ಟಡದ ಲಾಕರ್ ಪ್ಲಾಜಾವನ್ನು ಸಮಾರೋಪ ಸಮಾರಂಭದ ದಿನ ಉದ್ಘಾಟಿಸಲಾಯಿತು. ಸಂಘದ ಈ ಎಲ್ಲಾ ಅಭಿವೃದ್ಧಿಗೆ ಸಂಘದ ಸದಸ್ಯರು, ಆಡಳಿತ ಮಂಡಳಿಯವರು ಮತ್ತು ಸಿಬ್ಬಂದಿಯವರು ಕಾರಣೀಭೂತರಾಗಿರುತ್ತಾರೆ.



ಕಾರ್ಯಕ್ರಮದಲ್ಲಿ ಪತ್ತಿನ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಶ್ರೀ ವಿ. ರಾಜು ಅವರನ್ನು ಗೌರವಿಸಲಾಯಿತು

# ಕರ್ನಾಟಕದೊಂದಿಗೆ ರಾಷ್ಟ್ರಪಿತ ಮಹಾತ್ಮಾಗಾಂಧಿ ಸಂಬಂಧ ಒಂದು ಒಳನೋಟ

▸▸ ಮಂಜುನಾಥ್ ನಾಯ್ಕ್



ರಾಷ್ಟ್ರಪಿತ ಮಹಾತ್ಮಾಗಾಂಧಿ ಅವರು ಸ್ವಾತಂತ್ರ್ಯ ಹೋರಾಟದ ಅವದಿಯಲ್ಲಿ 18ಕ್ಕೂ ಹೆಚ್ಚುಬಾರಿ ಕರ್ನಾಟಕದ ವಿವಿಧ ಭಾಗಗಳಿಗೆ ಭೇಟಿ ನೀಡಿ ಸ್ವಾತಂತ್ರ್ಯ ಚಳವಳಿಯ ಜೊತೆಗೆ ನಾನ ರೀತಿಯಲ್ಲಿ ಸಮಾಜ ಸುಧಾರಣಾ ಕಾರ್ಯಕ್ಕೆ ಚಾಲನೆ ನೀಡಿದ್ದಾರೆ.

1924ರಲ್ಲಿ ಮಹಾತ್ಮಾಗಾಂಧಿಯವರ ಅಧ್ಯಕ್ಷತೆಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ನಡೆದಿದ್ದು ಕರ್ನಾಟಕದ ಬೆಳಗಾವಿಯಲ್ಲಿ ಈ ಅಧಿವೇಶನದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದಂತೆ ಹಲವಾರು ಐತಿಹಾಸಿಕ ನಿರ್ಣಯ ಕೈಗೊಳ್ಳಲಾಗಿದೆ.

ಮಹಾತ್ಮಾಗಾಂಧಿ ಅವರು ಪ್ರಪ್ರಥಮ ಬಾರಿಗೆ ತಮ್ಮ ಕಸ್ತೂರ್ಬಾ ಗಾಂಧಿಯವರ ಜೊತೆಗೆ 1915 ಮೇ ತಿಂಗಳ 8 ರಂದು ಬೆಂಗಳೂರಿಗೆ ಭೇಟಿ ನೀಡುತ್ತಾರೆ. ಆ ಸಮಯದಲ್ಲಿ ಅವರು ಭಾಷಣ ಮಾಡಿದ ಸಭಾಂಗಣಕ್ಕೆ ಬಾಪೂಜಿ ಸಭಾಂಗಣ ಎಂದು ನಾಮಕರಣ ಮಾಡಲಾಗಿದೆ ಅದು ಇಂದಿನ ಸರ್ಕಾರಿ ಕಲಾ ಕಾಲೇಜಿನಲ್ಲಿದೆ.

1920ರ ಅಗಸ್ಟ 21 ರಂದು ಎರಡನೇ ಬಾರಿಗೆ ಬೆಂಗಳೂರಿಗೆ ಭೇಟಿ ನೀಡಿದ ಮಹಾತ್ಮಾಗಾಂಧಿ ಬೆನ್‌ಸನ್ ಟೌನ್ ಖುದ್ದೂಸ್ ಸಾಹೇಬ್ ಈದ್ಗಾ ಮೈದಾನದಲ್ಲಿ ಭಾಷಣ ಮಾಡುತ್ತಾರೆ.

ಮಹಾತ್ಮಾಗಾಂಧಿ ಅವರ ಅಧ್ಯಕ್ಷತೆಯಲ್ಲಿ 1924ರಲ್ಲಿ ಬೆಳಗಾವಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ನಡೆಯಿತು. ಈ ಐತಿಹಾಸಿಕ ಅಧಿವೇಶನದಲ್ಲಿ ಮಹಾತ್ಮಗಾಂಧಿ ಅವರು ಸಕ್ರಿಯವಾಗಿ ಭಾಗವಹಿಸಿ ಕಾಂಗ್ರೆಸ್ ಇನ್ನಷ್ಟು ಕ್ರಿಯಾತ್ಮಕವಾಗಿ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸುವಂತೆ ಕರೆ ನೀಡಿದರು. ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ನಡೆದ ಏಕೈಕ ಅಧಿವೇಶನ ಇದಾಗಿದೆ. ಈ ಅಧಿವೇಶನದ ಸವಿನೆನಪಿಗಾಗಿ ಬೆಳಗಾವಿಯಲ್ಲಿ ಸ್ಮಾರಕ ಭವನ ನಿರ್ಮಿಸಲಾಗಿದೆ.

1927ರ ಎಪ್ರಿಲ್ 20 ರಂದು ರೈಲು ಪ್ರಯಾಣದ ಮೂಲಕ ಯಶವಂತಪುರಕ್ಕೆ ಆಗಮಿಸುವ ಮಹಾತ್ಮಾಗಾಂಧಿ ಅವರು ಯಶವಂತಪುರ ರೈಲ್ವೆ ನಿಲ್ದಾಣದಲ್ಲಿ ಪ್ರಾರ್ಥನಾ ಸಭೆ ನಡೆಸಿದರು. ಇದೇ ಪ್ರವಾಸದ ಸಮಯದಲ್ಲಿ ಚಿಕ್ಕಬಳ್ಳಾಪುರದ ನಂದಿಗಿರಿದಾಮ ಗಾಂಧೀಜಿ ಭೇಟಿ ನೀಡಿ ಕೆಲ ದಿನಗಳ ಕಾಲ ವಿಶ್ರಾಂತಿ ಪಡೆಯುತ್ತಾರೆ.

1927ರ ಜುಲೈ 19ರಂದು ಮಹಾತ್ಮಾಗಾಂಧಿ ಅವರು ಕೃಷ್ಣರಾಜ ಸಾಗರ (ಕೆ.ಆರ್.ಎಸ್) ಜಲಾಶಯಕ್ಕೆ ಭೇಟಿ ನೀಡುತ್ತಾರೆ. ಈ ಸಮಯದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಹಾಗೂ ಭಾರತರತ್ನ ಸರ್. ಎಂ.ವಿಶ್ವೇಶ್ವರಯ್ಯ ಅವರ ಕಾರ್ಯವನ್ನು ಮುಕ್ತ ಕಂಠದಿಂದ ಶ್ಲಾಘಿಸುತ್ತಾರೆ. ಇದೇ ಪ್ರವಾಸದ ಕಾಲಘಟ್ಟದಲ್ಲಿ ಬೆಂಗಳೂರು ಇಂಪಿರಿಯಲ್ ಹಾಲಿನ ಡೈರಿಗೆ ಭೇಟಿ ನೀಡಿದ ಮಹಾತ್ಮಾಗಾಂಧಿ ಅವರು ಹೈನುಗಾರಿಕೆ ಬಗ್ಗೆ ಮಾಹಿತಿ ಪಡೆಯತ್ತಾರೆ. ಕಸ್ತೂರ್ಬಾ ಗಾಂಧಿ ಅವರು ನೊಬೆಲ್ ಪ್ರಶಸ್ತಿ ಪುರಸ್ಕೃತ ವಿಜ್ಞಾನಿ ಸರ್. ಸಿ.ವಿ. ರಾಮನ್ ಅವರ ಪತ್ನಿ ಲೋಕಸುಂದರಿ ಅವರನ್ನು ಭೇಟಿ ಮಾಡಿ ಉಭಯ ಕುಶಲೋಪರಿ ನಡೆಸುತ್ತಾರೆ.

ಈ ಪ್ರವಾಸದ ಸಂದರ್ಭದಲ್ಲಿ ಗಾಂಧೀಜಿ ಮತ್ತು ಕಸ್ತೂರ್ಬಾ ಗಾಂಧಿ ಮೈಸೂರಿನ ದಿವಾನರಾದ ಮಿರ್ಜಾ ಇಸ್ಮಾಯಿಲ್ ಅವರ ಮನೆಗೆ ಭೇಟಿ ನೀಡಿ ಅತಿಥ್ಯ ಸ್ವೀಕರಿಸುತ್ತಾರೆ.

ಚಿಕ್ಕಮಗಳೂರು ಜಿಲ್ಲೆಯ ಕಡೂರಿಗೆ ಭೇಟಿ ನೀಡಿದ ಗಾಂಧೀಜಿ ಅವರು 1927ರ ಅಗಸ್ಟ್ 19 ರಂದು ಚಿಕ್ಕಮಗಳೂರಿನಲ್ಲಿ ಸಾರ್ವಜನಿಕ ಸಭೆಯನ್ನುದ್ದೇಶಿ ಭಾಷಣ ಮಾಡುತ್ತಾರೆ. ಸಕ್ರಿಯವಾಗಿ ಸ್ವಾತಂತ್ರ್ಯ



**ಮಹಾತ್ಮಾಗಾಂಧಿ ಅವರ ಅಧ್ಯಕ್ಷತೆಯಲ್ಲಿ 1924ರಲ್ಲಿ ಬೆಳಗಾವಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ನಡೆಯಿತು. ಈ ಐತಿಹಾಸಿಕ ಅಧಿವೇಶನದಲ್ಲಿ ಮಹಾತ್ಮಗಾಂಧಿ ಅವರು ಸಕ್ರಿಯವಾಗಿ ಭಾಗವಹಿಸಿ ಕಾಂಗ್ರೆಸ್ ಇನ್ನಷ್ಟು ಕ್ರಿಯಾತ್ಮಕವಾಗಿ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸುವಂತೆ ಕರೆ ನೀಡಿದರು. ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ನಡೆದ ಏಕೈಕ ಅಧಿವೇಶನ ಇದಾಗಿದೆ. ಈ ಅಧಿವೇಶನದ ಸವಿನೆನಪಿಗಾಗಿ ಬೆಳಗಾವಿಯಲ್ಲಿ ಸ್ಮಾರಕ ಭವನ ನಿರ್ಮಿಸಲಾಗಿದೆ.**

ಹೋರಾಟದಲ್ಲಿ ಪಾಲ್ಗೊಳ್ಳುವಂತೆ ಕರೆ ನೀಡುತ್ತಾರೆ.


1927 ಮತ್ತು 1936ರಲ್ಲಿ ಶಂಕರಪುರದ ಮಹಿಳಾ ಸೇವಾ ಸಮಾಜಕ್ಕೆ ಮಹಾತ್ಮಾಗಾಂಧಿ ಮತ್ತು ಕಸ್ತೂರ್ಬಾ ಗಾಂಧಿ ಭೇಟಿ ನೀಡಿ ಮಹಿಳೆಯರು ಶಿಕ್ಷಣ ಪಡೆದು ಸ್ವಾವಲಂಬನೆಯ ಜೀವನ ಸಾಗಿಸಲು ಉತ್ತೇಜನ ನೀಡುತ್ತಾರೆ. ಬೆಂಗಳೂರಿನ ರಾಷ್ಟ್ರೀಯ ಹೈನುಗಾರಿಕೆ ಸಂಸ್ಥೆಗೆ ಭೇಟಿ ನೀಡಿದ ಮಹಾತ್ಮಾಗಾಂಧಿ ಅವರು ಪಶು ಸಂಗೋಪನೆ ಕುರಿತು ಮಾಹಿತಿ ಪಡೆಯುತ್ತಾರೆ. ಈ ಸಂದರ್ಭದಲ್ಲಿ ಅವರು ಸಂದರ್ಶಕರ ಪುಸ್ತಕದಲ್ಲಿ ಹಸ್ತಾಕ್ಷರ ಮಾಡಿ ತಮ್ಮ ಹಸರಿನ ಜೊತೆಗೆ ರೈತ ಸಾಬರಮತಿ ಆಶ್ರಮ ಎಂದು ನಮೂದಿಸಿದ್ದಾರೆ.

1934ರ ಜನವರಿ 7ರಂದು ಮಹಾತ್ಮಾಗಾಂಧಿಯವರು ಶೇಷಾದ್ರಿಪುರಂ ದೀನಸೇವಾ ಸಂಘಕ್ಕೆ ಭೇಟಿ ನೀಡುತ್ತಾರೆ. ಈ ಪ್ರವಾಸದ ಸಮಯದಲ್ಲಿ ಕಡೂರು, ಬಳ್ಳಾರಿ, ವಿಜಯಪುರ (ಬಿಜಾಪುರ), ಮಂಗಳೂರು ಹಾಗೂ ಕಾರವಾರದಲ್ಲಿ ಹರಿಜನ ಪ್ರವಾಸ ಕೈಗೊಂಡು ಆ ಸಮುದಾಯ ಅಸ್ಪೃಶ್ಯತೆಯಿಂದ ಹೊರಬಂದು ಮುಖ್ಯವಾಹಿನಿಗೆ ಬರುವಂತೆ ಮಾಡಲು ಉತ್ತೇಜನ ನೀಡುತ್ತಾರೆ ಮತ್ತು ಬಹಿರಂಗ ಸಭೆಯನ್ನುದ್ದೇಶಿಸಿ ಭಾಷಣ ಮಾಡುತ್ತಾರೆ.

1934 ಜೂನ 6 ರಂದು ಮಂಡ್ಯ ಬಳಿಯ ಸೋಮನಹಳ್ಳಿಗೆ ಭೇಟಿ ನೀಡಿದ ಮಹಾತ್ಮಾಗಾಂಧೀಜಿ ಅವರು ಅಲ್ಲಿಯ ಮುಖಂಡರೊಂದಿಗೆ ಸಭೆ ನಡೆಸುತ್ತಾರೆ. ಈ ಸಂದರ್ಭದಲ್ಲಿ ಬಾಲಕ ಎಸ್.ಎಂ. ಕೃಷ್ಣ ಗಾಂಧೀಜಿಯವರ ಆಶೀರ್ವಾದ ಪಡೆಯುತ್ತಾರೆ. ಮುಂದೆ ಅವರೆ ಕರ್ನಾಟಕದ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿರುವುದು ಇತಿಹಾಸ.

ಈ ಪ್ರವಾಸದ ಸಮಯಲ್ಲಿ ಬೆಂಗಳೂರು ಹೊರವಲಯದ ಕೆಂಗೇರಿಯಲ್ಲಿ 1934 ರ ಜನವರಿ 6 ರಂದು ಮಹಾತ್ಮಾಗಾಂಧೀಜಿಯವರು ಕುಡಿಯುವ ನೀರಿನ ಬಾವಿ ಉದ್ಘಾಟಿಸುತ್ತಾರೆ.

ಇದಕ್ಕೂ ಎರಡು ದಿನಮೊದಲು ಜೂನ್ 4 ರಂದು ಮಲ್ಲೇಶ್ವರಂ ಅಸೋಸಿಯೇಷನ್ ಸಮಾರಂಭದಲ್ಲಿ ಗಾಂಧೀಜಿ ಭಾಗವಹಿಸುತ್ತಾರೆ. ಬೆಂಗಳೂರಿನ ಮಲ್ಲೇಶ್ವರಂನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಹಿಳಾ ಸೇವಾ ಸಮಾಜ ಒಪ್ಪಿಸಿದ ಭಿನ್ನವತ್ತಳೆಗೆ ಗಾಂಧೀಜಿ ಸ್ಥಳದಲ್ಲೆ ಉತ್ತರ ನೀಡುತ್ತಾರೆ. ಶಿಕ್ಷಣಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ 1936ರಲ್ಲಿ ಬೆಂಗಳೂರಿನ ಯಲೆಚೇನಹಳ್ಳಿಯಲ್ಲಿ ಕಸ್ತೂರ್ಬಾ ಗಾಂಧಿಯವರು ಶಾಲೆಯನ್ನು ಉದ್ಘಾಟಿಸುತ್ತಾರೆ.



1934ರಲ್ಲಿ ಉತ್ತರ ಕನ್ನಡ ಜಿಲ್ಲೆಯ ಶಿರಸಿಗೆ ಭೇಟಿ ನೀಡುತ್ತಾರೆ. ಶಿರಸಿಯ ಮಾರಿಕಾಂಬಾ ದೇವಿಗೆ ಕೋಣ ಬಲಿಕೊಡುವ ಪದ್ಧತಿಯ ಬಗ್ಗ ಗಾಂಧೀಜಿ ಆಕ್ಷೇಪ ವ್ಯಕ್ತಪಡಿಸುತ್ತಾರೆ. ಗಾಂಧೀಜಿಯವರು ಅಭಿಪ್ರಾಯಕ್ಕೆ ಗೌರವ ನೀಡಿದ ಮಾರಿಕಾಂಬಾ ದೇವಸ್ಥಾನದ ಆಡಳಿತಮಂಡಳಿ ಅಂದಿನಿಂದ ಮಾರಿಕಾಂಬಾ ದೇವಿಗೆ ಕೋಣ ಬಲಿಕೊಡುವ ಪದ್ಧತಿಯನ್ನು ನಿಲ್ಲಿಸುತ್ತದೆ ಎಂಬುದನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದು.

ಬದನವಾಳ ನೂಲುವ ಪ್ರಾಂತ್ಯಕ್ಕೆ ಭೇಟಿ ನೀಡುವ ಮಹಾತ್ಮಾಗಾಂಧೀಜಿ ಹರಿಜನ ಪ್ರವಾದ ಕೈಗೊಳ್ಳುತ್ತಾರೆ. 1936 ಮೇ–31ರಂದು ಕೋಲಾರದ ಮುಖಂಡ ಕೆ.ಸಿ.ರೆಡ್ಡಿಯವರು ಗಾಂಧೀಜಿ ಅವರೊಂದಿಗೆ ಜನಜಾಗೃತಿ ಪಾದಯಾತ್ರೆ ನಡೆಸುತ್ತಾರೆ.

ಜೂನ್–5 ರಂದು ಮಾಹಾತ್ಮಾಗಾಂಧಿ ಅವರು ಬೆಂಗಳೂರಿನ ಪ್ರತಿಷ್ಠಿತ ಭಾರತೀಯ ವಿಜ್ಞಾನ ಸಂಸ್ಥೆಗೆ ಭೇಟಿ ನೀಡುತ್ತಾರೆ.

ಗಾಂಧಿ ಗ್ರಾಮವೆಂದೆ ಹೆಸರಾದ ಬೆಳಗಾವಿ ಜಿಲ್ಲೆಯ ಹುದಳಿ ಗ್ರಾಮಕ್ಕೆ 1937ರಂದು ಗಾಂಧೀಜಿ ಭೇಟಿ ನೀಡುತ್ತಾರೆ, ಈ ಸಂದರ್ಭದಲ್ಲಿ ಸಹಕಾರ ತತ್ವದಡಿಯಲ್ಲಿ ಗ್ರಾಮೋದ್ಯೋಗ ಆರಂಭಿಸಲು ಗ್ರಾಮಸ್ಥರಿಗೆ ಗಾಂಧೀಜಿ ಉತ್ತೇಜನ ನೀಡುತ್ತಾರೆ.

ಹೀಗೆ ಗಾಂಧೀಜಿ ಅವರು ಕರ್ನಾಟಕಕ್ಕೆ 18 ಹೆಚ್ಚು ಭಾರಿ ಭೇಟಿ ನೀಡಿ ಸ್ವಾತಂತ್ರ್ಯ ಚಳವಳಿಗೆ ಉತ್ತೇಜನ ನೀಡುವ ಜೊತೆಗೆ, ಶಿಕ್ಷಣ, ಆರ್ಥಿಕ ಸ್ವಾವಲಂಭನೆಗಾಗಿ ಗ್ರಾಮೀಣಭಾಗದಲ್ಲಿ ಗುಡಿಕೈಗಾರಿಕೆಗೆ ಆದ್ಯತೆ, ಸಹಕಾರ ಚಳವಳಿಗೆ ಪ್ರೋತ್ಸಹ, ಅಸ್ಪೃಶ್ಯ ನಿವಾರಣೆಗೆ ಒತ್ತು ನೀಡಲು ತಮ್ಮ ಪ್ರವಾಸ ಬಹುಭಾಗವನ್ನು ವಿನಿಯೋಗಿಸುತ್ತಾರೆ.

# ದೀಪಾವಳಿ ಹಬ್ಬದ ಬೆಳಕಿನಲ್ಲಿ ಕಷ್ಟದ ಕತ್ತಲೆಯನ್ನು ಓಡಿಸೋಣ

▸▸ ಸವಿತಾ ನಾಯ್ಕ್



ಹಿಂದೂಗಳ ದೊಡ್ಡ ಹಬ್ಬ ಎಂದರೆ ದೀಪಾವಳಿ ಇದನ್ನು ಬೆಳಕಿನ ಹಬ್ಬ ಎಂದು ಕರೆಯುತ್ತಾರೆ.ದೀಪಾವಳಿ ಹಬ್ಬ ಭಾರತ ಮತ್ತು ವಿದೇಶಗಳಲ್ಲಿ ಇರುವ ಹಿಂದೂ ಸಮುದಾಯದವರು ಸಡಗರ ಸಂಭ್ರಮದ ಜೊತೆಗೆ ಅತ್ಯಂತ ವಿಜ್ರಂಭಣೆಯಿಂದ ಆಚರಿಸುತ್ತಾರೆ. ಆದರೆ ಇತ್ತೀಚಿನ ವರ್ಷಗಳಲ್ಲಿ ದೀಪಾವಳಿಯ ಪಟಾಕಿ ಸಿಡಿತದ ಆರ್ಭಟದಿಂದ ಹೆಚ್ಚುತ್ತಿರುವ ಶಬ್ದಮಾಲಿನ್ಯ ಹಾಗೂ ವಾಯುಮಾಲಿನ್ಯದಿಂದ ದೊಡ್ಡ ಸುದ್ದಿಯಾಗುತ್ತದೆ. ಹಬ್ಬ ಆಚರಣೆ ಜೊತೆಗೆ ಪರಿಸರ ರಕ್ಷಣೆಗೂ ಒತ್ತು ನೀಡಬೇಕು ಎಂಬ ಕೂಗು ಪರಿಸರವಾದಿಗಳಿಂದ ಕೇಳಿಬರುತ್ತಿದೆ.

ಈ ಹಬ್ಬದಲ್ಲಿ ಹೊಡೆಯುವ ಪಟಾಕಿಗಳು ವಾಯು ಮತ್ತು ಶಬ್ದಮಾಲಿನ್ಯ ಉಂಟು ಮಾಡುತ್ತದೆ, ರಾಸಾಯನಿಕ ವಸ್ತುಗಳನ್ನು ಮಿಶ್ರ ಮಾಡಿರುವ ರಂಗೋಲಿಗಳು ಮಣ್ಣನ್ನು ಕಲುಷಿತಗೊಳಿಸುತ್ತವೆ ಹಾಗೂ ಅಲಂಕಾರಕ್ಕೆ ಬಳಸುವ ಪ್ಲಾಸ್ಟಿಕ್ ವಸ್ತುಗಳೂ ಪರಿಸರಕ್ಕೆ ಪೂರಕವಾಗಿಲ್ಲ. ಆದ್ದರಿಂದ ಪ್ರತಿಯೊಬ್ಬರು ಕೂಡಾ ಸಾಧ್ಯವಾದಷ್ಟು ಈ ಆಚರಣೆಗಳನ್ನು ಪರಿಸರ ಸ್ನೇಹಿಯಾಗಿ ಮತ್ತು ಸುರಕ್ಷಿತವಾಗಿ ಆಚರಿಸಬೇಕು ಎಂಬುದು ಪರಿಸರವಾದಿಗಳ ಒತ್ತಾಯವಾಗಿದೆ.

**ನೈಸರ್ಗಿಕ ಆಚರಣೆಗೆ ಒತ್ತು :** ಸುಂದರವಾದ ರಂಗೋಲಿಗಳು ಹಬ್ಬದ ಕಳೆಯನ್ನು ಹೆಚ್ಚಿಸುತ್ತವೆ. ಆದರೆ ರಂಗೋಲಿಗೆ ಬಳಸುವ ವಿಷಕಾರಿ ಕೃತಕ ಪುಡಿಗಳಿಗೆ ನೋ ಎನ್ನಿ. ಸಾಧ್ಯವಾದಷ್ಟು ನೈಸರ್ಗಿಕ ವಸ್ತುಗಳಿಂದ ಮಾಡಿದ ರಂಗೋಲಿ ಪುಡಿಗಳನ್ನು ಬಳಸಿ ಎನ್ನುತ್ತಾರೆ ಗೃಹಿಣಿ ಸುಜಾತ.

ರಂಗೋಲಿಗೆ ನೈಸರ್ಗಿಕ ಪುಡಿಗಳನ್ನೇ ಬಳಸಿ ಅಂದರೆ ಹಳದಿ ಬಣ್ಣಕ್ಕೆ ಅರಶಿಣವನ್ನು, ಬಿಳಿ ಬಣ್ಣಕ್ಕೆ ಅಕ್ಕಿ ಹಿಟ್ಟನ್ನು, ಕಂದು ಬಣ್ಣಕ್ಕೆ ಕಾಫಿ ಪುಡಿ ಮತ್ತು ಕೆಂಪು ಬಣ್ಣಕ್ಕೆ ಕುಂಕುಮವನ್ನು ಬಳಸುವುದು ಉತ್ತಮ. ವರ್ಣರಂಜಿತ ನೈಸರ್ಗಿಕ ಲುಕ್‌ಗೆ ಹೂವಿನ ಪಕಳೆಗಳು ಮತ್ತು ಎಲೆಗಳನ್ನು ಬಳಸುವುದು ಒಳ್ಳೆಯದು. ಇಂಥ ರಂಗೋಲಿಗಳು ನೋಡಲು ಕೂಡಾ ಚೆನ್ನಾಗಿರುತ್ತವೆ. ಹಬ್ಬ ಮುಗಿದ ಮೇಲೆ ಇವುಗಳನ್ನು ಸುಲಭವಾಗಿ ತೆಗೆದು ಕಾಂಪೋಸ್ಟ್ ಬಿನ್‌ಗೆ ಹಾಕಬಹುದು.

ದೀಪಾವಳಿ ಹಬ್ಬದ ಅಂಗವಾಗಿ ಮಕ್ಕಳು ಸಹಿತ ಮನೆಮಂದಿಯೆಲ್ಲಾ ಮೈಗೆ ಎಣ್ಣೆ ಹಚ್ಚಿ ಬಿಸಿನೀರಿನ ಅಭ್ಯಂಜನ ಮಾಡಿಕೊಂಡು ಹೊಸ ಬಟ್ಟೆ ಧರಿಸಿ ಬೆಳಕನ್ನು ನೋಡಿ ಮನೆಯ ಹಿರಿಯ ಆಶೀರ್ವಾದ ಪಡೆದು ವಾಡಿಕೆ.ಕುಟುಂಬ ಸದಸ್ಯರೆಲ್ಲ ಜೊತೆಯಾಗಿ ಹಬ್ಬದ ಸಿಹಿ ತಿಂಡಿ ಸೇವಿಸುವುದು, ಬಂದು ಬಾಂಧವರಿಗೆ ಸಿಹಿ ತಿಂಡಿ ಹಂಚುವುದು ಹಬ್ಬದ ಪ್ರಮುಖ ಅಂಗವಾಗಿದೆ.

**ಪ್ಲಾಸ್ಟಿಕ್ ಬಳಕೆ ಬೇಡ :** ದೀಪಾವಳಿಗೆ ಹೆಚ್ಚಿನವರು ಪ್ಲಾಸ್ಟಿಕ್‌ನಿಂದ ಮಾಡಿದ ಅಲಂಕಾರಿಕ ವಸ್ತುಗಳನ್ನು ಬಳಸುತ್ತಾರೆ. ಪ್ಲಾಸ್ಟಿಕ್‌ನ ಹೂವು, ಬೌಲ್, ತೋರಣ, ಪ್ಲಾಸ್ಟಿಕ್‌ನ ಗಿಫ್ಟ್ ಐಟಂ ಇತ್ಯಾದಿಗಳು. ಪ್ಲಾಸ್ಟಿಕ್ ಮಯವಾಗಿರುತ್ತವೆ. ಆದರೆ ಈ ಪ್ಲಾಸ್ಟಿಕ್‌ಗಳು ಮಣ್ಣಿನಲ್ಲಿ ಕರಗುವುದಿಲ್ಲ.





ಪರಿಸರಕ್ಕೆ ಹಾನಿಯುಂಟು ಮಾಡುವ ಇಂಥ ಡೆಕೋರ್ ಕ್ರ್ಯಾಕರ್ಸ್‌ಗಳಿಂದ ದೂರವಿರಿ. ಹೂವು, ಎಲೆ, ಮಣ್ಣಿನ ಕಲಾಕೃತಿಗಳು ಮುಂತಾದ ನೈಸರ್ಗಿಕ ಅಲಂಕಾರಿಕ ವಸ್ತುಗಳನ್ನು ಬಳಸಿ.ಕೆಲವರು ಅತಿಥಿಗಳಿಗೆ ಡಿಸ್ಪೋಸೇಬಲ್ ಪ್ಲಾಸ್ಟಿಕ್ ಪ್ಲೇಟ್‌ಗಳಲ್ಲಿ ಊಟ ಬಡಿಸುತ್ತಾರೆ. ಇದಕ್ಕಿಂತ ಎಲೆಯಿಂದ ಮಾಡಿದ ನ್ಯಾಚುರಲ್ ಪ್ಲೇಟ್‌ಗಳಲ್ಲಿ ಊಟ ನೀಡಿದರೆ ಉತ್ತಮ.

**ಪಟಾಕಿಗೆ ಪರ್ಯಾಯ ಹಸಿರು ಪಟಾಕಿ :** ವಿವಿಧ ರೀತಿಯ ಪಟಾಕಿಗಳು ಪರಿಸರಕ್ಕೆ ತೀರಾ ಹಾನಿಯನ್ನುಂಟು ಮಾಡುತ್ತವೆ. ಇದರ ಹೊಗೆ ಮತ್ತು ರಾಸಾಯನಿಕ ವಸ್ತು ಬೆರೆತ ದಪ್ಪ ಕಾಗದಗಳು ಪರಿಸರಕ್ಕೆ ಒಳ್ಳೆಯದಲ್ಲ. ಆದ್ದರಿಂದ ಪಟಾಕಿಗೆ ನೋ ಎಂದರೆ ಒಳ್ಳೆಯದು. ಇದರ ಬದಲು ದೀಪಗಳನ್ನು ಬೆಳಗಿಸಿ.ಪಟಾಕಿ ಹೊಡೆಯಲೇ ಬೇಕಿದ್ದರೆ ಪುನರ್ ಬಳಕೆಗೆ ಯೋಗ್ಯವಾದ ಪೇಪರ್‌ಗಳಿಂದ ಮಾಡಿದ ಇಕೊ ಫ್ರೆಂಡ್ಲಿ ಪಟಾಕಿಗಳನ್ನು ಸಿಡಿಸಿ.ಅತ್ಯಂತ ಕಡಿಮೆ ಪ್ರಮಾಣದಲ್ಲಿ ಪಟಾಕಿ ಖರೀದಿಸಿ.

**ಮಣ್ಣಿನ ಹಣತೆ ಬೆಳಗಿಸಿ :** ಹಬ್ಬಕ್ಕೆ ಬಣ್ಣ ಬಣ್ಣದ ಕ್ಯಾಂಡಲ್‌ಗಳನ್ನು ಬೆಳಗಿಸುವುದಕ್ಕಿಂತ ಮಣ್ಣಿನ ಹಣತೆಯಲ್ಲಿ ಎಣ್ಣೆ ಹಾಕಿ ದೀಪ ಬೆಳಗಿಸಿ. ಮಣ್ಣಿನ ಹಣತೆಗಳನ್ನು ಮತ್ತೆ ಮತ್ತೆ ಬಳಸಬಹುದು. ಇದನ್ನು ಪರಿಸರ ಸ್ನೇಹಿ ವಸ್ತುಗಳಿಂದಲೇ ತಯಾರಿಸಲಾಗುತ್ತದೆ. ಇದೇ ರೀತಿ ತೀಕ್ಷ್ಣವಾದ ರಾಸಾಯನಿಕ ಬಣ್ಣಗಳನ್ನು ಹಚ್ಚಿದ ಹಣತೆಗಳನ್ನು ಕೊಳ್ಳಬೇಡಿ. ಪೆಟ್ರೋಲಿಯಂ ಬಳಸಿ ಮಾಡುವ ಕ್ಯಾಂಡಲ್‌ಗಳು ವಿಷಕಾರಿ



ವಸ್ತುಗಳನ್ನು ವಾತಾವರಣಕ್ಕೆ ಬಿಡುಗಡೆ ಮಾಡುತ್ತವೆ. ಇವುಗಳಿಗೂ ನೋ ಎನ್ನಿ. ಮನೆ ಮುಂದೆ ತೂಗು ಹಾಕುವ ಆಕಾಶಬುಟ್ಟಿಯೂ ಪರಿಸರ ಸ್ನೇಹಿಯಾಗಿರಲಿ. ಪುನರ್ ಬಳಕೆಗೆ ಯೋಗ್ಯವಾದ ಕಾಗದದಿಂದ ತಯಾರಿಸಿದ ಆಕಾಶಬುಟ್ಟಿಯನ್ನೇ ಬಳಸಿದರೆ ಉತ್ತಮ.

ಸಡಗರ ಸಂಭ್ರಮದಿಂದ ಹಾಗೂ ಸಂತೋಷದಿಂದ ಕೂಡಿದ ಬೆಳಕಿನ ಹಬ್ಬವನ್ನು ಆಚರಿಸುವ ಪ್ರತಿಯೊಬ್ಬರು ಪರಿಸರ ರಕ್ಷಣೆಗೆ ಆದ್ಯತೆ ನೀಡಿದರೆ ಪರಿಸರ ಹಾಗೂ ಪರಿಸರದಲ್ಲಿರುವ ಜೀವ ಜಂತು, ಪ್ರಾಣಿ ಪಕ್ಷಿಗಳು ಗಿಡ ಮರಗಳ ರಕ್ಷಣೆ ಆದ್ಯತೆ ನೀಡಿದಂತಾಗುತ್ತದೆ ಅಲ್ಲದೆ ಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಿದಂತಾಗುತ್ತದೆ.

# ಸಂಶಿ ಅರ್ಬನ್ ಕೋ-ಆಪ್ ಕ್ರೆಡಿಟ್ ಸೊಸಾಯಿಟಿ ಲಿ., ಸಂಶಿ ಇದರ ಬೆಳ್ಳಿ ಮಹೋತ್ಸವದ ಸಮಾರಂಭ




ಸಂಶಿ ಅರ್ಬನ್ ಕೋ–ಆಪ್ ಕ್ರೆಡಿಟ್ ಸೊಸಾಯಿಟಿ ಲಿ., ಸಂಶಿ ಧಾರವಾಡ ಇದರ ಬೆಳ್ಳಿ ಮಹೋತ್ಸವದ ಸಮಾರಂಭದಲ್ಲಿ ಪತ್ತಿನ ಮಹಾಮಂಡಳದ ನಿರ್ದೇಶಕರುಗಳಾದ ಡಾ॥ಸಂಜಯ ಪಿ ಹೊಸಮಠ, ಶ್ರೀ ತಮ್ಮಣ್ಣ ಬಾಲಪ್ಪ ಕೆಂಚರಡ್ಡಿ ಮತ್ತು ಶ್ರೀ ಉಮೇಶ್ ಶಿ ಬಾಳಿರವರಿಗೆ ಸನ್ಮಾನಿಸಿದ ಸಂದರ್ಭ

# ಕರ್ನಾಟಕದ ಸುವರ್ಣ ಯುಗದ ಇತಿಹಾಸ ಸಾರುವ ನಾಡಹಬ್ಬ ದಸರಾ

▶▶ ಸವಿತಾ ನಾಯ್ಕ್



ಈ ಬಾರಿ ರಾಜ್ಯಾದ್ಯಂತ ಮುಂಗಾರು ಮಳೆ ಹದವಾಗಿ ಬಿದ್ದ ಪರಿಣಾಮ ರಾಜ್ಯದ ಎಲ್ಲಾ ನದಿಗಳು ತುಂಬಿ ಹರಿಯುತ್ತಿದ್ದು ಅಣೆಕಟ್ಟುಗಳು ಭರ್ತಿಯಾಗಿವೆ. ಕೆರೆ,ಕಾಲುವೆ, ಕುಂಟೆಗಳು ತುಂಬಿ ತುಳುಕುತ್ತಿವೆ. ಬರಗಾಲದ ಛಾಯೆಯಿಂದ ಹೊರಬಂದು ರೈತರ ಮುಖದಲ್ಲಿ ಮಂದಹಾಸ ಮೂಡಿದ್ದು, ಕೃಷಿ ಚಟುವಟಿಕೆಗಳು ಚುರುಕಾಗಿದೆ. ಇಂತಹ ಸಮೃದ್ಧಿಯ ಕಾಲಘಟ್ಟದಲ್ಲಿ ನಾಡಹಬ್ಬ ದಸರಾ ಆಚರಣೆ ಜನತೆಯ ಖುಷಿಗೆ ಇನ್ನಷ್ಟು ಮೆರಗು ನೀಡಿದೆ.

ಕರ್ನಾಟಕದಲ್ಲಿ ದಸರಾ ಹಬ್ಬವನ್ನು ನಾಡಹಬ್ಬವಾಗಿ ಅತ್ಯಂತ ಸಡಗರ ಸಂಭ್ರಮ ಶ್ರದ್ಧಾಭಕ್ತಿಯಿಂದ ಆಚರಿಸಲಾಗುತ್ತದೆ.

ಅದ್ದೂರಿಯ ಮೈಸೂರ ದಸರಾ ಜೊತೆಯಲ್ಲಿ, ಮಡಿಕೇರಿ ದಸರಾ, ಮಂಗಳೂರು ದಸರಾ ಸಹಿತ ರಾಜ್ಯದ ವಿವಿಧ ಭಾಗಗಳಲ್ಲಿ ದಸರಾ ಹಬ್ಬವನ್ನು ವೈವಿಧ್ಯಮಯವಾಗಿ ಆಚರಿಸಲಾಗುತ್ತದೆ.

ನಾಡಹಬ್ಬ ಎಂದೇ ಖ್ಯಾತಿಗಳಿಸಿರುವ ಮೈಸೂರು ದಸರಾವನ್ನು ಹತ್ತು ದಿನಗಳ ಕಾಲ ಸುದೀರ್ಘ ಹಬ್ಬವಾಗಿ ಆಚರಿಸುತ್ತಾರೆ. ಭಾರತ ಮಾತ್ರವಲ್ಲದೇ ದಸರಾ ವೈಭವವನ್ನು ಕಣ್ತುಂಬಿಕೊಳ್ಳಲು ದೇಶ ವಿದೇಶಿಗಳ ಲಕ್ಷಾಂತರ ಸಂಖ್ಯೆಯಲ್ಲಿ ಪ್ರವಾಸಿಗರು ಸಾಂಸ್ಕೃತಿಕ ನಗರಿ ಮೈಸೂರಿಗೆ ಆಗಮಿಸುತ್ತಾರೆ..

ಒಂದು ಕಾಲಘಟ್ಟದಲ್ಲಿ ಆಳರಸರ ಮಹೋತ್ಸವವಾಗಿ ಆಚರಿಸಲಾಗುತ್ತಿದ್ದ ದಸರಾ ಇಂದು ಸರಕಾರವೆ ಅದನ್ನು ನಾಡಹಬ್ಬವೆಂದು ಅಧಿಕೃತವಾಗಿ ಘೋಷಿಸಿ ಸಂಪೂರ್ಣವಾಗಿ ಸರ್ಕಾರಿ ವೆಚ್ಚದಲ್ಲಿ ಹತ್ತು ದಿನಗಳ ಕಾಲ ಧಾರ್ಮಿಕ ಮತ್ತು ಸಾಂಸ್ಕೃತಿಕ ವೈಭವದದಿಂದ ಆಚರಿಸುತ್ತದೆ. ದಸರಾ ಹಬ್ಬ ಆಚರಣೆ ಮೂಲಕ ಕನ್ನಡ ನಾಡಿನ ಕಲೆ, ಸಂಸ್ಕೃತಿ, ಆಚಾರ, ವಿಚಾರ ಆಹಾರ, ವಿಹಾರ ಸಹಿತ ಸಂಪೂರ್ಣವಾಗಿ ಕರ್ನಾಟಕವನ್ನು ದೇಶ ವಿದೇಶಗಳ ಪ್ರವಾಸಿಗರಿಗೆ ಪರಿಚಯಿಸುವ ಮೂಲಕ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲಾಗುತ್ತದೆ.

ಕನ್ನಡ ನಾಡು, ನುಡಿ,ನೆಲ, ಜಲ, ಕಲೆ, ಸಂಸ್ಕೃತಿಯ ಕುರಿತು ವಿಶೇಷ ಕಾಳಜಿ ಹೊಂದಿರುವ ಹಿರಿಯ ಸಾಹಿತಿ ಹಾಗೂ ಭಾಷಾ ವಿಜ್ಞಾನಿ ಡಾ ಹಂಪ ನಾಗರಾಜಯ್ಯ ಅವರ ಅಮೃತ ಹಸ್ತದಿಂದ ಈ ಬಾರಿಯ ನಾಡಹಬ್ಬ ದಸರಾ ಉತ್ಸವಕ್ಕೆ ಚಾಲನೆ ಸಿಗಲಿದೆ. ಇದು ತಮಗೆ ಜೀವಿತಾವಧಿಯಲ್ಲಿ ಸಿಕ್ಕ ಅತಿದೊಡ್ಡ ಗೌರವ ಎಂದು

ಡಾ ಹಂಪನಾಗರಾಜಯ್ಯ ಮುಕ್ತ ಮನಸ್ಸಿನಿಂದ ಅಭಿಪ್ರಾಯ ಹಂಚಿಕೊಂಡಿದ್ದಾರೆ. ತಮ್ಮ ಜೀವ ಇರುವ ತನಕ ಕನ್ನಡ ನಾಡು ನುಡಿಯ ಸೇವೆ ಮಾಡುವುದಾಗಿ ಮನಬಿಚ್ಚಿ ಹೇಳಿದ್ದಾರೆ.

ದಸರಾ ಮಹೋತ್ಸವಕ್ಕೆ ನಾಲ್ಕು ಶತಮಾನಕ್ಕಿಂತಲೂ ಹೆಚ್ಚಿನ ಇತಿಹಾಸವಿದೆ. ಭಾರತೀಯ ಸಂಸ್ಕೃತಿಯ ಚರಿತ್ರೆಯಲ್ಲೇ ಇಷ್ಟೊಂದು ಕಾಲ ನಡೆದು ಬಂದಿರುವ ಮತ್ತೊಂದು ಹಬ್ಬ ಕಾಣಸಿಗುವುದು ಬಹಳ ಅಪರೂಪ. ಮೈಸೂರಿನ ಅಧಿದೇವತೆ ಚಾಮುಂಡೇಶ್ವರಿಯ ಆರಾಧನೆಯೊಂದಿಗೆ ಆರಂಭವಾಗುವ ನವರಾತ್ರಿ ಹಾಗೂ ಹತ್ತನೇ ದಿನದಂದು ನಡೆಯುವ ವೈಭವದ ವಿಜಯ ದಶಮಿಯ ಮೈಸೂರು ದಸರಾ ಮಹೋತ್ಸವಕ್ಕೆ ಅದರದೇ ಆದ ಐತಿಹಾಸಿಕ ಪರಂಪರೆ ಹಾಗೂ ಸಾಂಸ್ಕೃತಿಕ ಹಿನ್ನೆಲೆ ಇದೆ.

**ಮೈಸೂರು ದಸರಾ ಆಚರಣೆಯ ಇತಿಹಾಸ :** ಕರ್ನಾಟಕ ಇತಿಹಾಸದಲ್ಲಿ ಸುವರ್ಣಯುಗವನ್ನು ಸೃಷ್ಟಿಸಿ ವಿಜಯನಗರ ಸಾಮ್ರಾಜ್ಯವನ್ನು ಕಟ್ಟಿ ವೈಭವದಿಂದ ಮೆರೆದವರು ವಿಜಯನಗರ ಅರಸರು. ಇವರ ಕಾಲದಿಂದ ಆರಂಭಗೊಂಡು ಆಚರಿಸಲ್ಪಡುತ್ತಿದ್ದ ನವರಾತ್ರಿ ಉತ್ಸವದ ವಿಜಯ ದಶಮಿಯ ದಸರಾ ಹಬ್ಬಕ್ಕೆ ಹೆಚ್ಚಿನ ಕಳೆ ತಂದುಕೊಟ್ಟವರು ವಿಜಯನಗರ ಅರಸರಲ್ಲೇ ಅತ್ಯಂತ ಪ್ರಖ್ಯಾತರಾಗಿದ್ದ ಶ್ರೀಕೃಷ್ಣದೇವರಾಯ. ಆ ಕಾಲದಲ್ಲಿ ಹಂಪೆಯಲ್ಲಿರುವ ಮಹಾನವಮಿ ದಿಬ್ಬ ಮತ್ತು ವಿಜಯ ವಿಠಲ ದೇವಾಲಯಗಳು ದಸರಾ ಮಹೋತ್ಸವದ ಕೇಂದ್ರಗಳಾಗಿದ್ದವು.

ವಿಜಯನಗರ ಸಾಮ್ರಾಜ್ಯದ ಶಕ್ತಿ ಸಾಮರ್ಥ್ಯ, ಸಂಪತ್ತು, ವೈಭವ-ವೈಭೋಗ, ವೀರತ್ವ-ಧೀರತ್ವ, ಕಲೆ, ಸಾಹಿತ್ಯ, ಸಂಗೀತ, ನೃತ್ಯ, ಸಂಸ್ಕೃತಿ, ಶ್ರೀಮಂತಿಕೆಯನ್ನು ತೋರ್ಪಡಿಸಿಕೊಳ್ಳುವ ಹಿನ್ನಲೆಯಲ್ಲಿ ಬಹು ಮುಖ್ಯವಾಗಿ ವಿಜಯದ ದ್ಯೋತಕವಾಗಿ ವಿಜಯದಶಮಿಯ ದಸರಾ ಮಹೋತ್ಸವವನ್ನು ವಿಜಯ ನಗರ ಅರಸರು ಆಚರಿಸುತ್ತಿದ್ದರು.

ಈ ಸಂಭ್ರಮದ ಉತ್ಸವವನ್ನು ವೀಕ್ಷಿಸಲು ದೇಶ- ವಿದೇಶಗಳ ಗಣ್ಯರು, ಪ್ರವಾಸಿಗರು ಇಲ್ಲಿಗೆ ಭೇಟಿ ನೀಡಿದ ಉಲ್ಲೇಖಗಳಿವೆ. 11ನೇ ಶತಮಾನದಲ್ಲಿ ಇಲ್ಲಿಗೆ ಭೇಟಿ ನೀಡಿದ್ದ ವಿದೇಶಿ ಪ್ರವಾಸಿಗರಾದ ಅಲ್ಬೆರೋನಿ, 15-16ನೇ ಶತಮಾನದಲ್ಲಿ ಬಂದಿದ್ದ ಪರ್ಷಿಯಾದ ಅಬ್ದುಲ್ ರಜಾಕ್, ಇಟಲಿಯ ನಿಕೋಲಕೊಂಟಿ, ಪೋರ್ಚುಗೀಸಿನ ಡೊಮಿಂಗೋಪಾಯಸ್ ಮೊದಲಾದವರು ವಿಜಯನಗರ ಸಾಮ್ರಾಜ್ಯದ ವೈಭವೋಪೇತವಾದ ಈ ಮಹೋತ್ಸವವನ್ನು ಕೊಂಡಾಡಿ, ತಮ್ಮ ಪ್ರವಾಸ ಕಥನಗಳಲ್ಲಿ ದಾಖಲಿಸಿದ್ದಾರೆ.

ವಿಜಯದಶಮಿ ದಸರಾ ಮಹೋತ್ಸವವನ್ನು ವಿಜಯನಗರ ಸಾಮ್ರಾಜ್ಯ ಪತನದ ನಂತರ ಮುಂದುವರಿಸಿಕೊಂಡು ಬಂದವರು ಯದುವಂಶದ ಮೈಸೂರು ಒಡೆಯರು. ಯದುವಂಶದ ಆಳ್ವಿಕೆಯ 9ನೇ ಅರಸರಾದ ರಾಜ ಒಡೆಯರು(1578-1617) ತಮ್ಮ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣದಲ್ಲಿ 1610ರಲ್ಲಿ ವಿಜಯನಗರದ ರಾಜಪರಂಪರೆಯಂತೆ ನವರಾತ್ರಿ ಉತ್ಸವದಂದು ದಸರಾ ಮಹೋತ್ಸವವನ್ನು ಆರಂಭಿಸಿದರು.

ವಿಜಯನಗರ ಅರಸರ ಸಂಪ್ರದಾಯದಂತೆ ದಸರಾಗೆ ಸಂಬಂಧಿಸಿದ ಎಲ್ಲಾ ರೀತಿಯ ಶಾಸ್ತ್ರ ಹಾಗೂ ವಿಧಿವಿಧಾನಗಳನ್ನು ಅತ್ಯಂತ ಶ್ರದ್ಧಾಭಕ್ತಿಯಿಂದ ಯದುವಂಶಸ್ಥರೂ ಅನುಸರಿಕೊಂಡು ಬಂದರು. ಈ ಪ್ರಕಾರದಂತೆ ಅಶ್ವಯುಜ ಶುದ್ಧ ಪ್ರಥಮೆಯಂದು ನವರಾತ್ರಿ ಉತ್ಸವ ಆರಂಭವಾಗಿ ಮಹಾನವಮಿಯ ಕಡೇ ದಿನದವರೆಗೂ ಪ್ರತಿನಿತ್ಯ ಪೂಜೆ ಪುರಸ್ಕಾರ, ಪೂರ್ವಾಹ್ನ ಮತ್ತು ಮಧ್ಯಾಹ್ನ ಸಿಂಹಾಸನಾರೋಹಣ, ಒಡ್ಡೋಲಗ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಬೇಕೆಂದು ವಿಧೇಕವನ್ನೇ ಮಾಡಿ ದಸರಾ ಹಬ್ಬವನ್ನು ಆಚರಣೆಗೆ ತಂದರು. 1799ರವರೆಗೂ ಅಂದಿನ ಮೈಸೂರು ರಾಜ್ಯದ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣದಲ್ಲೇ ದಸರಾ ನಡೆಯುತ್ತಿತ್ತು.

ಹೈದರಾಲಿ ಮತ್ತು ಟಿಪ್ಪುವಿನ ಆಳ್ವಿಕೆಯ ನಂತರ ಮತ್ತೆ ಅಧಿಕಾರಕ್ಕೆ ಬಂದ ಯದುಕುಲತಿಲಕ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ ಆಳ್ವಿಕೆಯ(1799-1868)ಕಾಲದಲ್ಲಿ ರಾಜ್ಯದ ರಾಜಧಾನಿ ಶ್ರೀರಂಗಪಟ್ಟಣದಿಂದ ಮೈಸೂರಿಗೆ ವರ್ಗವಾಯಿತು. ಅಲ್ಲಿಂದ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಅತೀವ ಕಾಳಜಿಯಿಂದ ಮತ್ತಷ್ಟು ವಿಜೃಂಭಣೆಯಿಂದ 1800ರಲ್ಲಿ ಮೈಸೂರಿನಲ್ಲಿ ದಸರಾ ಪ್ರಾರಂಭವಾಗಿ "ಮೈಸೂರು ದಸರಾ" ಎಂದು ವಿಶ್ವವಿಖ್ಯಾತಿಯನ್ನು ಪಡೆಯಿತು.

ನಾಡ ದೇವತೆ, ಶಕ್ತಿ ದೇವತೆ ತಾಯಿ ಚಾಮುಂಡೇಶ್ವರಿಯನ್ನು ಒಂಬತ್ತು ದಿನಗಳ ಕಾಲ ವಿವಿಧ ಅಲಂಕಾರದಲ್ಲಿ ಪೂಜಿಸುವ ಮೂಲಕ ನಾಡಿನ ಎಲ್ಲಾ ಸಂಕಷ್ಟಗಳನ್ನು ದೂರ ಮಾಡಿ ಮಳೆ, ಬೆಳೆ ಚೆನ್ನಾಗಿ ಬಂದು ನಾಡಿನ ಜನತೆ ಸುಖ, ಶಾಂತಿ, ಸಮೃದ್ಧಿ ಹಾಗೂ ಸೌಹಾರ್ದಯುತವಾಗಿ ಬದುಕು ನಡೆಸುವಂತೆ ಆಶೀರ್ವದಿಸು ಎಂದು ಪ್ರಾರ್ಥಿಸಲಾಗುತ್ತದೆ. ಮೈಸೂರ ದಸರಾ ಆಚರಣೆಯಿಂದ ನಾಡಿನ ಪ್ರವಾಸೋದ್ಯಮಕ್ಕೆ ಉತ್ತೇಜನ ಸಿಗುವುದರ ಜೊತೆಗೆ ಉದ್ಯೋಗ ಸೃಷ್ಟಿ ಹಾಗೂ ಆರ್ಥಿಕ ಚಟುವಟಿಕೆಗಳ ಚೇತರಿಕೆಗೂ ಅನುಕೂಲ ಕಲ್ಪಿಸುತ್ತದೆ ಆ ಹಿನ್ನಲೆಯನ್ನು ದೇಶ ವಿದೇಶಗಳಲ್ಲಿ ಖ್ಯಾತಿ ಪಡೆದ ಮೈಸೂರು ದಸಾರ ಉತ್ಸವವನ್ನು ರಾಜ್ಯದ ಪ್ರವಾಸೋದ್ಯಮ ಮತ್ತು ಆರ್ಥಿಕ ಬೆಳವಣಿಗೆಯ ದೃಷ್ಟಿಯಿಂದ ಅದ್ದೂರಿಯಾಗಿ ವಿಜೃಂಭಣೆಯಿಂದ ಆಚರಿಸಿದರೆ ಮಾತ್ರ ಪ್ರವಾಸಿಗರನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಕರ್ಷಿಸಲು ಅನುಕೂಲವಾಗುತ್ತದೆ. ಆ ಹಿನ್ನಲೆಯಲ್ಲಿ ನಾಡ ಹಬ್ಬ ದಸರಾ ಆಚರಣೆಗೆ ಯಾವುದೇ ರೀತಿಯಲ್ಲಿ ಚ್ಯುತಿ ಬರದಂತೆ ಕಾರ್ಯಕ್ರಮ ರೂಪಿಸುವುದು ಸರ್ಕಾರದ ಜವಾಬ್ದಾರಿ.

**2024 ದಸರಾ ಕಾರ್ಯಕ್ರಮ ಪಟ್ಟಿ ಹೀಗಿದೆ :** ಮೈಸೂರಿನ ಮುಕುಟದಂತಿರುವ ಚಾಮುಂಡೇಶ್ವರಿ ದೇವಿಗೆ ಪೂಜೆ ಸಲ್ಲಿಕೆ, ಆನಂತರ ಚಾಮುಂಡೇಶ್ವರಿ ದೇವಿಯನ್ನು ಚಿನ್ನದ ಅಂಬಾರಿಯಲ್ಲಿ ಕೂರಿಸಿ ಜಂಬೂ ಸವಾರಿಯಲ್ಲಿ ಮೆರವಣಿಗೆ ಮಾಡುವ ವಿಜಯದಶಮಿಯ ಸಡಗರ ಎಲ್ಲದಕ್ಕೂ ಇತಿಹಾಸ, ಪರಂಪರೆಯ ಮಹತ್ವವಿದೆ. ಈ ಎಲ್ಲಾ ಚಟುವಟಿಕೆಗಳು, ಮುಖ್ಯವಾಗಿ ದಸರಾ ಉದ್ಘಾಟನೆ ಸಮಯ, ವಿಜಯದಶಮಿ ದಿನ ನಂದಿ ಧ್ವಜ ಪೂಜೆ ಹಾಗೂ ಚಾಮುಂಡೇಶ್ವರಿ ತಾಯಿಗೆ ಸಿಎಂ ಸಿದ್ದರಾಮಯ್ಯ ಅವರು ಪುಷ್ಪಾರ್ಚನೆ ಮಾಡುವ ಸಮಯವೂ ಸೇರಿದಂತೆ ಧಾರ್ಮಿಕ ವೇಳಾಪಟ್ಟಿ ವಿವರ ಹೀಗಿದೆ.

## ಮೈಸೂರು ದಸರಾ ಹತ್ತು ದಿನಗಳ ಕಾಲ ನಡೆಯುವ ಕಾರ್ಯಕ್ರಮದ ವಿವರ

**ಅಕ್ಟೋಬರ್ 3 – ಗುರುವಾರ**

ಶರನ್ನವರಾತ್ರಿ ಪ್ರಾರಂಭ – ಶೈಲ ವ್ರತ, ಬೆಳಗ್ಗೆ 10:15 – 10:36 ಚಾಮುಂಡಿ ಬೆಟ್ಟದಲ್ಲಿ ಶ್ರೀ ಚಾಮುಂಡೇಶ್ವರಿ ಪೂಜೆ (ಜಯಲಕ್ಷ್ಮಿವ್ರತ). ಉದ್ಘಾಟನೆ – ಹಿರಿಯ ಸಾಹಿತಿ ಡಾ. ಹಂಪ ನಾಗರಾಜಯ್ಯ ಅವರಿಂದ.

ತಿಥಿ : ಪ್ರಥಮಾ ಸಂಜೆ 5:45 – 6:30 ಶುಭ ಮೇಷ ಲಗ್ನದಲ್ಲಿ ಅರಮನೆ ಪೂಜೆ ತಿಥಿ : ಪ್ರಥಮ

**ಅಕ್ಟೋಬರ್ 4 – ಶುಕ್ರವಾರ**

ಬ್ರಹ್ಮಚಾರಿಣೀ ತಿಥಿ : ದ್ವಿತೀಯ

**ಅಕ್ಟೋಬರ್ 5 – ಶನಿವಾರ**

ಚಂದ್ರಘಂಟಾ ತಿಥಿ : ತೃತೀಯ

**ಅಕ್ಟೋಬರ್ 6 – ಭಾನುವಾರ**

ಕೂಷ್ಮಾಂಡ ತಿಥಿ : ಚತುರ್ಥಿ

**ಅಕ್ಟೋಬರ್ 7 – ಸೋಮವಾರ**

ಸ್ಕಂದ ಮಾತಾ ತಿಥಿ: ಪಂಚಮಿ

**ಅಕ್ಟೋಬರ್ 8 – ಮಂಗಳವಾರ**

ಕಾತ್ಯಾಯಿನಿ – ಸರಸ್ವತಿ ಪೂಜಾ (ಮೂಲಾ ನಕ್ಷತ್ರದಲ್ಲಿ ಸರಸ್ವತಿ ಪೂಜೆ ಪ್ರಾರಂಭ ಮಾಡಿ ಶ್ರವಣ ನಕ್ಷತ್ರದ ದಿನ ಅಂದರೆ 24–10–2023ರ ಮಂಗಳವಾರ ವಿಸರ್ಜನೆ) ತಿಥಿ: ಷಷ್ಠಿ

**ಅಕ್ಟೋಬರ್ 9 – ಬುಧವಾರ**

ಕಾಳರಾತ್ರಿ – ಮಹಿಷಾಸುರ ಸಂಹಾರ ತಿಥಿ: ಸಪ್ತಮಿ

**ಅಕ್ಟೋಬರ್ 10 – ಗುರುವಾರ**

ದುರ್ಗಾಷ್ಟಮಿ – ಸಿದ್ಧಿ ಧಾತ್ರಿ ತಿಥಿ: ಅಷ್ಟಮಿ

**ಅಕ್ಟೋಬರ್ 11 – ಶುಕ್ರವಾರ**

ಮಹಾನವಮಿ – ಆಯುಧ ಪೂಜೆ, ಹಯಗ್ರೀವ ಪೂಜೆ, ಗಜಾಶ್ವಾದಿ ಪೂಜೆ, ಅಮಲುದೇವತಾ ಪೂಜೆ, ಮಹಾಗೌರಿ ತಿಥಿ: ನವಮಿ

**ಅಕ್ಟೋಬರ್ 12 – ಶನಿವಾರ**

ಮಧ್ಯಾಹ್ನ 1:46 – 2:08 ವಿಜಯ ದಶಮಿ ಮಧ್ಯಾಹ್ನ ಮಕರ ಲಗ್ನದಲ್ಲಿ ಮಂಗಳವಾರ ನಂದೀ ಧ್ವಜ ಪೂಜೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ.ತಿಥಿ: ದಶಮಿ ಸಂಜೆ 4:30 – 5:00 ಶುಭ ಮೀನ ಲಗ್ನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಗಣ್ಯಾತಿಗಣ್ಯರಿಂದ ಪುಷ್ಪಾರ್ಚನೆ ನಂತರ ಜಂಬೂ ಸವಾರಿ ಪ್ರಾರಂಭ. ಲಕ್ಷಾಂತರ ಜನರ ಸಮ್ಮುಖದಲ್ಲಿ ನಾಡಿನ ಕಲೆ ಸಂಸ್ಕೃತಿ, ಆಚಾರ ವಿಚಾರ ಸಹಿತ ಸಾಂಸ್ಕೃತಿಕ ಶ್ರೀಮಂತಿಕೆಯ ಅನಾವರಣ ಮಾಡುವ ಜಂಬೂ ಸವಾರಿ ನೋಡುವುದೇ ಕಣ್ಣಿಗೆ ಹಬ್ಬ. ಕರ್ನಾಟಕದ ಸುವರ್ಣ ಯುಗದ ಇತಿಹಾಸ ಸಾರುವ ನಾಡಹಬ್ಬ ದಸರಾವನ್ನು ಶತ ಶತಮಾನಗಳಿಂದ ಆಚರಿಸಿಕೊಂಡು ಬರುತ್ತಿರುವುದು ಕನ್ನಡ ನಾಡಿನ ಸಾಂಸ್ಕೃತಿಕ ವೈಭವವನ್ನು ಹೊರ ಜಗತ್ತಿಗೆ ಪರಿಚಯಿಸುವ ಉದಾತ್ತ ಕಾರ್ಯವಾಗಿದೆ.









# ಪತ್ತಿನ ಸಹಕಾರ ಸಂಘಗಳು ಉನ್ನತೀಕರಣಗೊಂಡು ಇನ್ನಷ್ಟು ಬಲಿಷ್ಠವಾಗಬೇಕೆಂದು ರಾಷ್ಟ್ರೀಯ ಸಹಕಾರ ಒಕ್ಕೂಟದ ಮಹಾಸಭೆಯಲ್ಲಿ ಡಾ. ಸಂಜಯ ಪಂಚಾಕ್ಷರಿ ಹೊಸಮಠ ಮಂಡನೆ




**ನವದೆಹಲಿ :** ದಿನಾಂಕ : 25/09/24 ರಂದು ನವದೆಹಲಿಯಲ್ಲಿ ನಡೆದ ರಾಷ್ಟ್ರೀಯ ಸಹಕಾರ ಒಕ್ಕೂಟದ ಸರ್ವಸಾಧಾರಣ ಸಭೆಯಲ್ಲಿ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ನಿರ್ದೇಶಕರಾದ ಡಾ॥ ಸಂಜಯ ಪಂಚಾಕ್ಷರಿ ಹೊಸಮಠ ಪತ್ತಿನ ಸಹಕಾರ ಸಂಘಗಳನ್ನು ಉನ್ನತೀಕರಣಗೊಳಿಸಲು ಹಾಗೂ ಸಹಕಾರ ಪತ್ತಿನ ಸಂಘಗಳನ್ನು ಇನ್ನಷ್ಟು ಸದೃಢಗೊಳಿಸಲು ಪ್ರಮುಖ ಅಂಶಗಳನ್ನು ರಾಷ್ಟ್ರೀಯ ಒಕ್ಕೂಟದ ಆಡಳಿತಮಂಡಳಿ ಹಾಗೂ ಸರ್ವ ಸಾಧಾರಣ ಸಭೆಯಲ್ಲಿ ದೇಶದ ವಿವಿಧ ರಾಜ್ಯಗಳಿಂದ ಭಾಗವಹಿಸಿದ ನೂರಾರು ಸಹಕಾರಿಗಳ ಸಮ್ಮುಖದಲ್ಲಿ ಪ್ರಸ್ತಾವನೆ ಮಂಡಿಸಿದರು.

(1) ಪತ್ತಿನ ಸಂಘಗಳಿಗೆ ಆದಾಯತೆರಿಗೆ (INCOME TAX) ಕೆಲವೊಂದಿಷ್ಟು ಸಮಸ್ಯೆಗಳು ಸಮಸ್ಯೆಗಳಾಗಿಯೇ ಉಳಿದಿದ್ದು ಕೇಂದ್ರ ಸರ್ಕಾರವು ಮಧ್ಯಸ್ಥಿಕೆ ವಹಿಸಿ ಈ ಸಮಸ್ಯೆಗಳನ್ನು ನಿವಾರಿಸಲು ಮುಂದಾಗಬೇಕೆಂದು ಕೋರಿದರು.

(2) ಪತ್ತಿನ ಸಹಕಾರಿ ಸಂಘಗಳಲ್ಲಿ ಹೂಡಿಕೆದಾರರಿಗೆ ವಿಮೆಯ (INSURANCE) ಅವಶ್ಯಕತೆಯ ಬಗ್ಗೆ ಕೂಲಂಕುಶವಾಗಿ ಚರ್ಚಿಸಿ ಸಭೆಗೆ ಮನವರಿಕೆ ಮಾಡಿಕೊಟ್ಟರು. ಈಗಾಗಲೇ ಕೇಂದ್ರ ಸರ್ಕಾರವು ಈ ಯೋಜನೆಯನ್ನು ಸಹಕಾರಿ ಬ್ಯಾಂಕುಗಳಿಗೆ ಅನುಕೂಲ ಮಾಡಿಕೊಟ್ಟಿದೆ. ಅದೇರೀತಿ ನಮ್ಮ ಪತ್ತಿನ ಸಂಘಗಳಿಗೂ ಕೂಡ ಮಾಡಿಕೊಡಬೇಕೆಂದು ವಿನಂತಿಸಿದರು.

(3) ಕೇಂದ್ರ ಸರ್ಕಾರವು ಖಾಸಗಿ ಬ್ಯಾಂಕುಗಳ ಸಾಲ ವಸೂಲಾತಿಯಲ್ಲಿ ಸರ್ಫೇಸಿ ಕಾಯ್ದೆಯನ್ನು (SARAFAESI ACT) ಅಳವಡಿಸಿದ್ದು ಅದೇ ರೀತಿ ಕಾಯ್ದೆಯನ್ನು ಪತ್ತಿನ ಸಂಘಗಳ ಸಾಲ ವಸೂಲಾತಿಗೆ ಅಳವಡಿಸಿದರೆ ತುಂಬಾ ಅನುಕೂಲವಾಗುವುದೆಂದು ವಿಮರ್ಷಿಸಿದರು.

(4) Credit Information Bureau (India) Limited **CBIL Scoring :** ಈ ತರಹದ ಸುವಿಧಗಳನ್ನು ಪತ್ತಿನ ಸಂಘಗಳಿಗೆ ಒದಗಿಸಿದರೆ ಸಂಘಗಳು ಸದಸ್ಯರಿಗೆ ಸಾಲ ಕೊಡುವ ಮುನ್ನವೇ ಎಚ್ಚೆತ್ತುಕೊಳ್ಳುತ್ತವೆ. ಇದರಿಂದ ಸಂಘಗಳು ಸಾಲಗಾರರಿಂದ ಮೋಸ ಹೋಗುವ ಪ್ರಮಾಣದಲ್ಲಿ ಬಹುತೇಕ ಇಳಿಕೆಯಾಗುತ್ತದೆ.

(5) ಬಹಳಷ್ಟು ಪತ್ತಿನ ಸಂಘಗಳು ಗ್ರಾಮೀಣ ಅರೆ ಗ್ರಾಮೀಣ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವದರಿಂದ National payment gateway ಸೌಲಭ್ಯಗಳನ್ನು ಪತ್ತಿನ ಸಂಘಗಳಿಗೆ ಒದಗಿಸಿದರೆ ಸಾಕಷ್ಟು ಗ್ರಾಮೀಣ ಜನತೆಗೆ ಅನುಕೂಲವಾಗುವುದೆಂದು ವಿವರಿಸಿದರು. ಈ ಸಂದರ್ಭದಲ್ಲಿ ಪತ್ತಿನ ಮಹಾಮಂಡಳದ ಅಧ್ಯಕ್ಷರಾದ ವಿ.ರಾಜು ಹಾಗೂ ನಿರ್ದೇಶಕರಾದ ಹೊನ್ನಯ್ಯ ವೀ ಹಿರೇಮಠ ಹಾಜರಿದ್ದರು.